**ಸರ್ವೋಚ್ಚ ನ್ಯಾಯಾಲಯ**

**ಸನ್ಮಾನ್ಯ ನ್ಯಾಯಮೂರ್ತಿ ಡಾ॥ ಧನಂಜಯ ವೈ. ಚಂದ್ರಚೂಡ್**

**ಹಾಗೂ**

**ಸನ್ಮಾನ್ಯ ನ್ಯಾಯಮೂರ್ತಿ ವಿನೀತ್ ಸರನ್**

ಮುನಿಶಾಮಪ್ಪ ಮತ್ತು ಇತರರು – ವಿರುದ್ಧ – ಕರ್ನಾಟಕ ರಾಜ್ಯ
ಜೊತೆಗೆ
ರಾಣಿ – ವಿರುದ್ಧ – ವೆಂಕಟೇಶಪ್ಪ ಮತ್ತು ಇತರರು

ಕ್ರಿಮಿನಲ್ ಅಪೀಲು ಸಂಖ್ಯೆ: 96–97/2011, ದಿನಾಂಕ: 24ನೇ ಜನವರಿ, 2019

(ಕ್ರಿಮಿನಲ್ ಅಪೀಲು ಸಂಖ್ಯೆ: 995/2011, 1362–1363/2011, 1362–1363/2011)

**ತೀರ್ಪು**

**ನ್ಯಾಯಮೂರ್ತಿ ಡಾ॥ ಧನಂಜಯ ವೈ. ಚಂದ್ರಚೂಡ್:**

ಭಾರತೀಯ ದಂಡ ಸಂಹಿತೆ, 1860ರ ('ದಂಡ ಸಂಹಿತೆ') 149ನೇ ಪ್ರಕರಣದೊಂದಿಗೆ ಓದಲಾದ 143, 148, 323, 324 ಹಾಗೂ 302ನೇ ಪ್ರಕರಣಗಳ ಮೇರೆಗೆ ಹಾಗೂ ಸ್ಫೋಟಕ ಸಾಮಗ್ರಿಗಳ ಅಧಿನಿಯಮ, 1908ರ 3, 4 ಹಾಗೂ 5ನೇ ಪ್ರಕರಣಗಳ ಮೇರೆಗಿನ ಅಪರಾಧಗಳಿಗಾಗಿ ಇವರನ್ನು ಅಧಿವಿಚಾರಣೆ ಮಾಡಲಾಗಿದ್ದ ಪ್ರಧಾನ ಸತ್ರ ನ್ಯಾಯಾಧೀಶರು, ಕೋಲಾರ ಇವರು, 31ನೇ ಅಕ್ಟೋಬರ್ 2003ರ ತೀರ್ಪಿನ ಮೂಲಕ, ಹನ್ನೊಂದು ಜನರನ್ನು ಖುಲಾಸೆಗೊಳಿಸಿದ್ದಾರೆ. ಗಾಯಗೊಂಡ ದೂರುದಾರನು ಕ್ರಿಮಿನಲ್ ಪುನರ್ ಪರಿಶೀಲನೆಯ ಮೂಲಕ ಖುಲಾಸೆಯನ್ನು ಆಕ್ಷೇಪಿಸುವ ಸಂದರ್ಭದಲ್ಲಿಯೇ ಕ್ರಿಮಿನಲ್ ಅಪೀಲಿನಲ್ಲಿನ ಖುಲಾಸೆಯ ಆದೇಶವನ್ನು ರಾಜ್ಯವು ಪ್ರಶ್ನಿಸಿತ್ತು. ದಿನಾಂಕ: 14ನೇ ಸೆಪ್ಟೆಂಬರ್ 2010ರ ತನ್ನ ತೀರ್ಪಿನ ಮೂಲಕ ಕರ್ನಾಟಕ ಉಚ್ಚ ನ್ಯಾಯಾಲಯವು, ಈ ಅಪೀಲನ್ನು ಭಾಗಶಃ ಪುರಸ್ಕರಿಸಿ, ದಂಡ ಸಂಹಿತೆಯ 149ನೇ ಪ್ರಕರಣದೊಂದಿಗೆ ಓದಲಾದ 304ನೇ

ಪ್ರಕರಣದ ಭಾಗ 1 ರ ಮೇರೆಗೆ ದಂಡನೀಯವಾದ ಅಪರಾಧಗಳ (ಅಧಿವಿಚಾರಣಾ ನ್ಯಾಯಾಲಯದ ಮುಂದಿರುವ 1 ರಿಂದ 4, 6 ರಿಂದ 8 ಹಾಗೂ 10 ರಿಂದ 12ರ ವರೆಗಿನ ಆಪಾದಿತರು) ಹತ್ತು ಆಪಾದಿತರನ್ನು ಅಪರಾಧಿಗಳೆಂದು ನಿರ್ಣಯಿಸಿ, ಪ್ರತಿಯೊಬ್ಬರಿಗೂ ಏಳು ವರ್ಷಗಳ ಅವಧಿಯವರೆಗೆ ಅವರಿಗೆ ಕಠಿಣ ಕಾರಾವಾಸ ಶಿಕ್ಷೆಯನ್ನು ವಿಧಿಸಿತು. ಅಷ್ಟೇ ಅಲ್ಲದೆ, ಪ್ರತಿಯೊಬ್ಬರನ್ನು ದಂಡ ಸಂಹಿತೆಯ 149ನೇ ಪ್ರಕರಣದೊಂದಿಗೆ ಓದಲಾದ 324ನೇ ಪ್ರಕರಣದ ಮೇರೆಗೆ ಅಪರಾಧಿಗಳೆಂದು ನಿರ್ಣಯಿಸಿ ಒಂದು ವರ್ಷದ ಅವಧಿಗೆ ಕಠಿಣ ಕಾರಾವಾಸ 5000/– ರೂ.ಗಳ ಜುಲ್ಮಾನೆ ವಿಧಿಸಿ ಜುಲ್ಮಾನೆ ಪಾವತಿಸಲು ತಪ್ಪಿದಲ್ಲಿ ಮೂರು ತಿಂಗಳುಗಳ ಅವಧಿಗೆ ಸಾದಾ ಕಾರಾವಾಸವನ್ನು ಅನುಭವಿಸುವ ಶಿಕ್ಷೆಯನ್ನು ವಿಧಿಸಲಾಯಿತು.

2. ಈ ವ್ಯವಹರಣೆಗಳಲ್ಲಿ, ಹತ್ತು ಜನ ಆಪಾದಿತರು ಮೂರು ಜೊತೆ ಕ್ರಿಮಿನಲ್ ಅಪೀಲುಗಳನ್ನು ಹೂಡಿದ್ದು,[*1] 302ನೇ ಪ್ರಕರಣಕ್ಕೆ ಬದಲಾಗಿ 149ನೇ ಪ್ರಕರಣದೊಂದಿಗೆ ಓದಲಾದ 304ನೇ ಪ್ರಕರಣ ಭಾಗ 1ರ ಮೇರೆಗೆ ಆಪಾದಿತನು ತಪ್ಪಿತಸ್ಥ ಎನ್ನುವ ಉಚ್ಚ ನ್ಯಾಯಾಲಯ ನಿರ್ಣಯದ ತೀರ್ಪಿನ ವಿರುದ್ಧ ಮೂಲ ದೂರುದಾರ ಪ್ರಾಸಾ.1 ಪ್ರಾಥಮಿಕವಾಗಿ ಕ್ರಿಮಿನಲ್ ಅಪೀಲನ್ನು[2] ಹೂಡಿದ್ದಾನೆ. ಶಿಕ್ಷೆಯನ್ನು ಹೆಚ್ಚಿಸಿರುವುದಕ್ಕೆ ಸಂಬಂಧಿಸಿದಂತೆ ಕೂಡ ಮನವಿಯನ್ನು ಮಾಡಿಕೊಂಡಿದ್ದಾನೆ.

3. ಸಾಕ್ಷಿಯಿಂದ ಕಂಡುಬರಬಹುದಾದಂತೆ ಘಟನೆಯ ಮೂಲ ಏನೆಂದರೆ, ಗೋಪಾಲಪ್ಪ ಹಾಗೂ ಬಚ್ಚಪ್ಪ (5ನೇ ಸಂಖ್ಯೆಯ ಆಪಾದಿತ ಮರಣ ಹೊಂದಿರುವುದರಿಂದ) ಸಹೋದರರು. ಅವರು

---

[*1]. 6, 10, 11 ಹಾಗೂ 12ನೇ ಸಂಖ್ಯೆಯ ಆಪಾದಿತರು ಕ್ರಿಮಿನಲ್ ಅಪೀಲು ಸಂಖ್ಯೆ:995–996/2011 ನ್ನು 1 ರಿಂದ 3 ರ ವರೆಗಿನ ಸಂಖ್ಯೆಯ ಆಪಾದಿತರು ಕ್ರಿಮಿನಲ್ ಅಪೀಲು ಸಂಖ್ಯೆ: 1362/2011ನ್ನು ಹಾಗೂ 4, 7ನೇ ಸಂಖ್ಯೆಯ ಆಪಾದಿತರು ಕ್ರಿಮಿನಲ್ ಅಪೀಲು ಸಂಖ್ಯೆ: 96–97/ 2011ನ್ನು ಹೂಡಿದ್ದಾರೆ.

2. ಕ್ರಿಮಿನಲ್ ಅಪೀಲು ಸಂಖ್ಯೆ 622/2011.

ಪ್ರತ್ಯೇಕವಾಗಿ ವಾಸಿಸುತ್ತಿದ್ದರು. 1ನೇ ಸಂಖ್ಯೆಯ ಆಪಾದಿತ (ವೆಂಕಟೇಶಪ್ಪ) 2ನೇ ಸಂಖ್ಯೆಯ ಆಪಾದಿತ (ನಾಗಪ್ಪ) 3ನೇ ಸಂಖ್ಯೆಯ ಆಪಾದಿತ (ದಾನೇಗೌಡ) 4ನೇ ಸಂಖ್ಯೆಯ ಆಪಾದಿತ (ಮುನಿಶ್ಯಾಮಪ್ಪ) 6ನೇ ಸಂಖ್ಯೆಯ ಆಪಾದಿತ (ಲಕ್ಷ್ಮಣ) 7ನೇ ಸಂಖ್ಯೆಯ ಆಪಾದಿತ (ಶೇಖರ್) ಹಾಗೂ 8ನೇ ಸಂಖ್ಯೆಯ ಆಪಾದಿತ (ಶ್ರೀನಿವಾಸ) ಇವರುಗಳು 5ನೇ ಸಂಖ್ಯೆ ಆಪಾದಿತನ ಮಕ್ಕಳಾಗಿದ್ದಾರೆ. 10ನೇ ಸಂಖ್ಯೆಯ ಆಪಾದಿತರು 2ನೇ ಸಂಖ್ಯೆಯ ಆಪಾದಿತನ ಪತ್ನಿಯಾಗಿದ್ದಾಳೆ, 12ನೇ ಸಂಖ್ಯೆ ಆಪಾದಿತಳು 1ನೇ ಸಂಖ್ಯೆಯ ಆಪಾದಿತನ ಪತ್ನಿಯಾಗಿದ್ದಾಳೆ. 1ನೇ ಸಂಖ್ಯೆಯ ಆಪಾದಿತನ ಮಗಳಾದ ಭಾಗ್ಯಮ್ಮನನ್ನು (9ನೇ ಸಂಖ್ಯೆಯ ಆಪಾದಿತೆ) ಬಾಲಾಪರಾಧಿಯೆಂದು ಅಧಿವಿಚಾರಣೆ ಮಾಡಲಾಗಿದೆ. ಆಪಾದಿತ **ಅಪೀಲುದಾರರ ವಂಶವೃಕ್ಷವನ್ನು ಈ ಮುಂದಿನಂತೆ ಚಿತ್ರಿಸಲಾಗಿದೆ:**

**ಆಪಾದಿತ 5 ಬಚ್ಚಪ್ಪ (ಮೃತ)ನು ಆಪರಾಧಿಕ ಸಾಕ್ಷ್ಯ 29 ಗೋಪಾಲಪ್ಪನ ಸಹೋದರ (ಎನ್‌ಇ)**

| **ವೆಂಕಟೇಶಪ್ಪ ಆಪಾದಿತ–1** | **ನಾಗಪ್ಪ ಆಪಾದಿತ–2** | **ದಾನೇಗೌಡ ಆಪಾದಿತ–3** | **ಮುನಿಶಾಮಪ್ಪ ಆಪಾದಿತ–4** | **ಲಕ್ಷ್ಮಣ ಆಪಾದಿತ–6** | **ಶೇಖರ್ ಆಪಾದಿತ–7** | **ಶ್ರೀನಿವಾಸ ಆಪಾದಿತ–8** |
|---|---|---|---|---|---|---|
| | | | | | | |
| ಪತ್ನಿ (ಮುನಿತಾಯಮ್ಮ) ಆಪಾದಿತ–12 | ಮೊದಲ ಪತ್ನಿ ಲಲಿತಮ್ಮ ಆಪಾದಿತ–10 | | | | | |
| | | | | | | |
| ಮಗಳು (ಭಾಗ್ಯಮ್ಮ) ಆಪಾದಿತ–9 ಬಾಲಾಪರಾಧಿ | 2ನೇ ಪತ್ನಿ (ಸುಮಿತ್ರಮ್ಮ) ಆಪಾದಿತ–11 | | | | | |

ಸ್ಪಷ್ಟತೆಯ ಕಾರಣಕ್ಕಾಗಿ ಪ್ರಾಸಿಕ್ಯೂಷನ್ ಸಾಕ್ಷಿದಾರರ ಕಡೆಯಿಂದ ವಂಶವೃಕ್ಷವನ್ನು, ಈ ಮುಂದಿನಂತೆ ಚಿತ್ರಿಸಲಾಗಿದ್ದು,

ಆಪರಾಧಿಕ ಸಾಕ್ಷ್ಯ 29 ಗೋಪಾಲಪ್ಪ (ಪ್ರಾಸಿಕ್ಯೂಷನ್ ಸಾಕ್ಷ್ಯ1ರ ಅಜ್ಜ) (ಎನ್'ಇ)

ಆಪರಾಧಿಕ ಸಾಕ್ಷ್ಯ 25 ವೆಂಕಟಮ್ಮ (ಪ್ರಾ.ಸಾ.1 ರ ಅಜ್ಜಿ) (ಎನ್'ಇ)

| **ಕೃಷ್ಣಪ್ಪ (ಪ್ರತಿವಾದಿ 1)** | **ಕೆಂಚಪ್ಪ (ಪ್ರತಿವಾದಿ 2)** | **ಗೋವಿಂದಪ್ಪ (ಪ್ರಾ.ಸಾ.6)** | **ನಾರಾಯಣಸ್ವಾಮಿ (ಪ್ರಾ.ಸಾ.2)** | **ಅಂಜನಪ್ಪ (ಪ್ರಾ.ಸಾ.4)** | **ಶ್ರೀರಾಮಪ್ಪ (ಪ್ರಾ.ಸಾ.5)** |
|---|---|---|---|---|---|
| | | | | | |

–

ಪತ್ನಿ (ಶಿವಮ್ಮ) (ಪ್ರಾ.ಸಾ.13)

–

ಮಗಳು (ಪ್ರಾ.ಸಾ.1) ರಾಣಿ

ಪತ್ನಿ (ಭಾಗ್ಯಮ್ಮ) (ಪ್ರಾ.ಸಾ.7)

4. ಕೆಂಚಪ್ಪ ಹಾಗೂ ಕೃಷ್ಣಪ್ಪರು ಹತ್ಯೆಯಾಗಿದ್ದು, ಇವರು ಗೋಪಾಲಪ್ಪನ (ಆಪರಾಧಿಕ ಸಾಕ್ಷ್ಯ 29) ಮಕ್ಕಳುಗಳಾಗಿದ್ದಾರೆ. ಗೋಪಾಲಪ್ಪ ಹಾಗೂ ಅವನ ಸಹೋದರ ಬಚ್ಚಪ್ಪ (5ನೇ ಸಂಖ್ಯೆಯ ಆಪಾದಿತ) ಇವರುಗಳ ನಡುವೆ ವಿವಾದವಿದ್ದು, ಅವರ ಪೂರ್ವಿಕರ ಆಸ್ತಿಯ ಸಂಬಂಧ ಇವರ ನಡುವೆ ಕೆಲವು ದಶಕಗಳಿಂದ ಸಿವಿಲ್ ವ್ಯಾಜ್ಯ ನಡೆಯುತ್ತಿತ್ತು. ಕುಟುಂಬಗಳ ನಡುವಿನ ಸಂಬಂಧ ಹಳಸಿತ್ತು ಹಾಗೂ ಅವರು ಮಾತನಾಡುತ್ತಿರಲಿಲ್ಲ. ಆ.ಸಾ.29 ಹಾಗೂ ಆಪಾದಿತ ಸಂಖ್ಯೆ:5 ಇವರ ಮನೆಗಳನ್ನು ಒಂದು ಖಾಲಿ ನಿವೇಶನ ಪ್ರತ್ಯೇಕಿಸಿತ್ತು.

5. 15ನೇ ಮಾರ್ಚ್ 1995ರಂದು ಬೆಳಿಗ್ಗೆ ಸುಮಾರು 8.30ಕ್ಕೆ ಪ್ರಾ.ಸಾ.19ನ್ನು ಒಳಗೊಂಡಂತೆ ಭೂಮಾಪನ ಇಲಾಖೆ ಅಧಿಕಾರಿಗಳು ಮನೆಗಳನ್ನು ಸಮೀಕ್ಷೆ ಮಾಡುವ ಸಂಬಂಧ ನಲ್ಲಪ್ಪನಹಳ್ಳಿ ಗ್ರಾಮಕ್ಕೆ ಭೇಟಿ ಕೊಟ್ಟಿದ್ದಾರೆ. 5ನೇ ಸಂಖ್ಯೆಯ ಆಪಾದಿತರಿಗೆ ಸೇರಿದ ಮನೆಯ ಸಮೀಕ್ಷೆಯನ್ನು ಪೂರ್ಣಗೊಳಿಸಿದ್ದರು. ಬೆಳಿಗ್ಗೆ 10 ರಿಂದ 10.30ರ ನಡುವೆ ಮೋಜಣಿ ಅಧಿಕಾರಿಗಳು, ಆಪರಾಧಿಕ ಸಾಕ್ಷ್ಯ 29ರ ಮನೆಯನ್ನು ಸಮೀಕ್ಷೆ ಮಾಡಲು ಬಂದಿದ್ದಾರೆ. ಆ ಹಂತದಲ್ಲಿ, ಆಪಾದಿತ

ಸಂಖ್ಯೆ.5 ಕೃಷ್ಣಪ್ಪ ಹಾಗೂ ಆಪರಾಧಿಕ ಸಾಕ್ಷ್ಯ 29 ಇವರ ನಡುವೆ ಈ ಸಮೀಕ್ಷೆ ನಡೆಯುವ ಅವಧಿಯಲ್ಲಿ ಮಾತಿನ ಚಕಮಕಿ ನಡೆದಿದ್ದು, 5ನೇ ಸಂಖ್ಯೆ ಆಪಾದಿತನು ಸ್ವತ್ತು ಸಿವಿಲ್ ನ್ಯಾಯಾಲಯದಲ್ಲಿ ವಿವಾದದಲ್ಲಿರುವುದರ ಆಧಾರದಿಂದ ಆ.ಸಾ.29ರ ಮನೆಯನ್ನು ಸಮೀಕ್ಷೆ ಮಾಡುವುದನ್ನು ತಡೆಯಲು ಕೋರಿದ್ದಾನೆ. ಎರಡೂ ಕಡೆಯವರ ನಡುವೆ ವಾಗ್ಯುದ್ಧ ನಡೆದಿದ್ದರಿಂದ, ಸಮೀಕ್ಷೆ ಅಧಿಕಾರಿಗಳು, ಸ್ಥಳವನ್ನು ಬಿಟ್ಟು ಹೋಗಿದ್ದಾರೆ. ತರುವಾಯ ಮಧ್ಯಾಹ್ನ 12 ಗಂಟೆಗೆ ಆಪಾದಿತನು ಬಾಕು, ಚಾಕು, ಸೈಕಲ್ ಚೈನು ಹಾಗೂ ಸ್ಫೋಟಕ ಸಾಮಗ್ರಿಗಳೊಂದಿಗೆ ಮಾರಣಾಂತಿಕ ಆಯುಧಗಳೊಂದಿಗೆ ಆಪಾದಿಸಿದಂತೆ ಆ.ಸಾ.29ರ ಮನೆಗೆ ಬಂದಿದ್ದಾನೆ. ಪ್ರಾಸಿಕ್ಯೂಷನ್ ವಾದ ಏನೆಂದರೆ 1ನೇ ಸಂಖ್ಯೆ ಆಪಾದಿತನು ಬಾಕುವಿನಿಂದ ಕೃಷ್ಣಪ್ಪನನ್ನು ಇರಿದಿದ್ದಾನೆ. 6ನೇ ಸಂಖ್ಯೆ ಆಪಾದಿತನು, ಸೈಕಲ್ ಚೈನಿನಿಂದ ಅವನನ್ನು ಥಳಿಸಿದ್ದಾನೆ. ಇದರ ಕಾರಣವಾಗಿ, ಕೃಷ್ಣಪ್ಪನಿಗೆ ಗಂಭೀರ ಗಾಯಗಳಾಗಿ ನೆಲದ ಮೇಲೆ ಕುಸಿದು ಬಿದ್ದಿದ್ದಾನೆ ಎಂಬುದಾಗಿದೆ. 3ನೇ ಸಂಖ್ಯೆಯ ಆಪಾದಿತನು ಕೃಷ್ಣಪ್ಪನ ಬಳಿ ನಿಂತಿದ್ದ ಕೆಂಚಪ್ಪನ ಹೊಟ್ಟೆಗೆ ಚಾಕುವಿನಿಂದ ಇರಿದಿದ್ದಾನೆ. 2ನೇ ಸಂಖ್ಯೆಯ ಆಪಾದಿತನು ಸ್ಫೋಟಕವನ್ನು ತೆಗೆದು ರಸ್ತೆಯ ಮೇಲೆ ಎಸೆದಿದ್ದಾನೆ. ಅದು ಶ್ರೀರಾಮಪ್ಪನನ್ನು ಗಾಯಗೊಳಿಸಿದೆ. ಬಾಂಬನ್ನು ಸಿಡಿಸಿದ ನಂತರ 2ನೇ ಸಂಖ್ಯೆಯ ಆಪಾದಿತನು ಅಲ್ಲಿಂದ ಓಡಿಹೋಗಲು ಪ್ರಯತ್ನಿಸಿದ್ದಾನೆ, ಆದರೆ ಆ ಪ್ರಯತ್ನದಲ್ಲಿ ಅವನು ಬಿದ್ದಿದ್ದಾನೆ ಅವನು ತನ್ನ ಜೇಬಿನಲ್ಲಿ ಕೊಂಡೊಯ್ಯುತ್ತಿದ್ದ ಬಾಂಬ್ ಸ್ಫೋಟಗೊಂಡಿದೆ. ಈ ಕಾರಣದಿಂದ ಅವನಿಗೆ ಗಾಯಗಳಾಗಿವೆ. ಪ್ರಾಸಿಕ್ಯೂಷನ್‌ನ ವಾದ ಏನೆಂದರೆ, 4ನೇ ಸಂಖ್ಯೆಯ ಆಪಾದಿತನು, ಆ.ಸಾ.29ನ್ನು ಥಳಿಸಿದ್ದಾನೆ, 6ನೇ ಸಂಖ್ಯೆಯ ಆಪಾದಿತನು, ಸೈಕಲ್ ಚೈನಿನಿಂದ ಕೃಷ್ಣಪ್ಪನನ್ನು ಥಳಿಸಿದ್ದಾನೆ. 7 ಹಾಗೂ 11ನೇ ಸಂಖ್ಯೆಯ ಆಪಾದಿತರು ಪ್ರಾ.ಸಾ.7ನ್ನು ಥಳಿಸಿದ್ದಾನೆ. ಆಗ, 8ನೇ ಸಂಖ್ಯೆಯ ಆಪಾದಿತನು ಸೈಕಲ್ ಚೈನಿನಿಂದ ಥಳಿಸಿದ್ದಾನೆ. ಮೂರು ಜನ ಹೆಂಗಸರು, ಎಂದರೆ 10, 11 ಹಾಗೂ 12ನೇ ಸಂಖ್ಯೆಯ ಹೆಂಗಸರ ತಲೆಗೆ ಕಟ್ಟಿದ್ದು, ಇವರು, ದೂರುದಾರ ತಂಡದವರ ಕಡೆಯವರನ್ನು ದೊಣ್ಣೆಗಳಿಂದ ಥಳಿಸಿರುವರೆಂದು ಹೇಳಲಾಗಿರುವ

ಕುಟುಂಬದವರಾಗಿದ್ದಾರೆ. ಕೆಂಚಪ್ಪ ಹಾಗೂ ಕೃಷ್ಣಪ್ಪ ಇಬ್ಬರಿಗೂ ಈ ಘಟನೆಯಲ್ಲಿ ಗಾಯಗಳಾದ ಕಾರಣದಿಂದ ಮೃತರಾಗಿದ್ದಾರೆ.

6. ಮಾಲೂರು ಸರ್ಕಲ್ ಪೊಲೀಸು ಠಾಣೆಯಲ್ಲಿ ಘಟನೆಯ ದಿನಾಂಕದಂದು 14:15 ಗಂಟೆಗೆ ಪ್ರಾ.ಸಾ.1 ರಾಣಿ (ದೂರುದಾರಳು) ಮೊದಲ ಮಾಹಿತಿ ವರದಿಯನ್ನು ಕೊಟ್ಟಿದ್ದಳು. ಪ್ರಾಸಿಕ್ಯೂಷನ್ನು ತನ್ನ ವಾದವನ್ನು ರುಜುವಾತುಪಡಿಸಲು ಇಪ್ಪತ್ತೈದು ಜನ ಸಾಕ್ಷಿದಾರರ ವಿಚಾರಣೆ ನಡೆಸಿತ್ತು. ಆಪಾದಿತನ ಪ್ರತಿವಾದದಲ್ಲಿ ಒಟ್ಟಾರೆಯಾಗಿ ಅದನ್ನು ನಿರಾಕರಿಸಲಾಗಿತ್ತು. ದೂರುದಾರಳನ್ನು ಪ್ರಾ.ಸಾ.1, ಪ್ರಾ.ಸಾ.3, 5, 6 ಮತ್ತು 7ನ್ನು ಗಾಯಗೊಂಡಿದ್ದ ಸಾಕ್ಷಿದಾರರೆಂದು ವಿಚಾರಣೆ ನಡೆಸಲಾಗಿತ್ತು. ಪ್ರಾ.ಸಾ.1ರ ಜೊತೆಗೂಡಿದ್ದ ಅವರು ನಿರ್ಣಾಯಕ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಇದರ ಆಧಾರದ ಮೇಲೆ ಪ್ರಾಸಿಕ್ಯೂಷನ್‌ನ ವಾದ ತಲೆಕೆಳಗಾಯಿತು. ಪ್ರಾ.ಸಾ.20 ಡಾ॥ ಕೆ. ಶ್ರೀನಿವಾಸನ್ ಇವರು, ಗಾಯಗೊಂಡ ಪ್ರಾಸಿಕ್ಯೂಷನ್ ಸಾಕ್ಷಿದಾರರು ಹಾಗೂ ಗಾಯಗೊಂಡ ಆಪಾದಿತರನ್ನು ಪರೀಕ್ಷಿಸಿದ್ದರು. ಪ್ರಾ.ಸಾ.20 ಮರಣೋತ್ತರ ಶವ ಪರೀಕ್ಷೆಯನ್ನು ಸಹಾ ನಡೆಸಿದ್ದರು.

7. ಅಧಿವಿಚಾರಣಾ ನ್ಯಾಯಾಲಯವು, ಮೃತ ಇಬ್ಬರನ್ನು ಕೊಲೆ ಮಾಡಿರುವ ಆರೋಪದ ಎಲ್ಲಾ ಆಪಾದಿತರನ್ನು ಖುಲಾಸೆಗೊಳಿಸಿತು. ಪ್ರಾಸಿಕ್ಯೂಷನ್ ಸಾಕ್ಷಿದಾರರ ಸಾಕ್ಷ್ಯವನ್ನು ಮೌಲ್ಯಮಾಪನ ಮಾಡಿದ ನಂತರ ಅಧಿವಿಚಾರಣಾ ನ್ಯಾಯಾಲಯವು, ಹೀಗೆ ಅಭಿಪ್ರಾಯಪಟ್ಟಿತ್ತು:

> *"ಪ್ರಾ.ಸಾ.4 ಅಂಜನಪ್ಪ, ಪ್ರಾ.ಸಾ.5 ಶ್ರೀರಾಮಪ್ಪ, ಪ್ರಾ.ಸಾ.6 ಗೋವಿಂದಪ್ಪ, ಪ್ರಾ.ಸಾ.7 ಭಾಗ್ಯಮ್ಮ, ಪ್ರಾ.ಸಾ.8 ಕೃಷ್ಣಪ್ಪ ಹಾಗೂ ಪ್ರಾ.ಸಾ.13 ಶಿವಮ್ಮ ಇವರ ಪಾಟೀ ಸವಾಲಿನ ಎಚ್ಚರಿಕೆಯ ಅವಗಾಹನೆಯು, ಆಪಾದಿತ ವ್ಯಕ್ತಿಗಳು, ಮಾರಣಾಂತಿಕ ಆಯುಧಗಳಿಂದ ಅವರ ಮನೆಗೆ ಬಂದಿರಲಿಲ್ಲ ಎಂಬುದನ್ನು ತೋರಿಸುತ್ತದೆ. ಇದು ಆಪಾದಿತ.1 ಹಾಗೂ ಮೃತ ಕೃಷ್ಣಪ್ಪನ ನಡುವೆ ಜೋರು ಮಾತಿನ ಚಕಮಕಿ ಪ್ರಾರಂಭವಾದ ನಂತರವಷ್ಟೇ ನಡೆದಿದ್ದು, ಆಗ ಉಳಿದ ವ್ಯಕ್ತಿಗಳು ಅಪರಾಧದ ಮುನ್ನೆಲೆಗೆ ಬಂದಿರುವುದು*

*ತಿಳಿದು ಬರುತ್ತದೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಆದಾಗ್ಯೂ, ಈ ಸಾಕ್ಷಿದಾರರ ಸಾಕ್ಷ್ಯವು, ಕೃಷ್ಣಪ್ಪನ ಬಲ ಭುಜಕ್ಕೆ ಆಪಾದಿತ.1 ಬಾಕುವಿನಿಂದ ತಿವಿದಿದ್ದಾನೆ ಹಾಗೂ ಆಪಾದಿತ.6 ಮೃತ ಕೃಷ್ಣಪ್ಪನ ಬೆನ್ನಿನ ಮೇಲೆ ಸೈಕಲ್ ಚೈನಿನಿಂದ ಹೊಡೆದಿದ್ದಾನೆ. ಆಪಾದಿತ.3, ಕೆಂಚಪ್ಪನ ಹೊಟ್ಟೆಗೆ ಬಾಕುವಿನಿಂದ ಚುಚ್ಚಿದ್ದು, ಇದು ಅವನ ಬೆನ್ನಿನ ಕಡೆಗೆ ಚುಚ್ಚಿಕೊಂಡಿದೆ ಎಂಬುದನ್ನು ಸೂಚಿಸುತ್ತದೆ. ಅಷ್ಟೇ ಅಲ್ಲದೆ, ಆಪಾದಿತ.2 ಕೈಬಾಂಬನ್ನು ಎಸೆದಿದ್ದು, ಅದು ಸ್ಫೋಟಗೊಂಡಿದುದರ ಕಾರಣದಿಂದ ಪ್ರಾ.ಸಾ.5 ಶ್ರೀರಾಮಪ್ಪನಿಗೆ ಗಾಯಗಳಾಗಿವೆ. ಆಪಾದಿತ.2 ಓಡಲು ಪ್ರಯತ್ನಿಸಿದಾಗ, ಅವನು ರಸ್ತೆ ಬದಿಯ ಮೋರಿಗೆ ಬಿದ್ದಿದ್ದಾನೆ. ಅವನು ಹಿಡಿದುಕೊಂಡಿದ್ದ ಮತ್ತೊಂದು ಕೈಬಾಂಬು ಸ್ಫೋಟಗೊಂಡಿದೆ. ಇದರಿಂದ ಆಪಾದಿತನ ಎರಡೂ ತೊಡೆಗಳಿಗೆ ಅವನೇ ಗಾಯ ಮಾಡಿಕೊಂಡಿದ್ದಾನೆ. ಈ ರೀತಿಯಲ್ಲಿ ಮೃತ ಕೃಷ್ಣಪ್ಪ ಹಾಗೂ ಮೃತ ಕೆಂಚಪ್ಪ ಈ ಆಪಾದಿತ ವ್ಯಕ್ತಿಗಳಿಂದ ಕೊಲೆಯಾಗಿರುವರೆಂದು ಈ ಎಲ್ಲಾ ಸಾಕ್ಷಿದಾರರು ಹೇಳಿಕೆ ನೀಡಿದ್ದಾರೆ".*

ಆದಾಗ್ಯೂ, ಅಧಿವಿಚಾರಣಾ ನ್ಯಾಯಾಲಯವು, ಆಪಾದಿತರು ಈ ಮುಂದಿನ ಕಾರಣಗಳಿಗಾಗಿ ಖುಲಾಸೆಗೆ ಹಕ್ಕುಳ್ಳವರಾಗಿದ್ದರೆನ್ನುವ ನಿರ್ಣಯಕ್ಕೆ ಬಂದಿದೆ:

*(i) ಪ್ರಾ.ಸಾ. 20ರ ಸಾಕ್ಷ್ಯವು, 2,3,4 ಹಾಗೂ 5ನೇ ಸಂಖ್ಯೆಯ ಆಪಾದಿತರು, ಘಟನೆಯಲ್ಲಿ ಗಾಯಗೊಂಡಿದ್ದಾರೆಂಬುದನ್ನು ಸೂಚಿಸುತ್ತದೆ. ಆಪಾದಿತರಿಗೆ ಆದ ಗಾಯಗಳು, ಗಂಭೀರ ಸ್ವರೂಪದ್ದಾಗಿವೆ. ಗೋಪಾಲಪ್ಪ ಹಾಗೂ ಬಚ್ಚಪ್ಪ ಕುಟುಂಬಗಳ ನಡುವೆ ಬಹಿರಂಗವಾಗಿ ಕಾದಾಟ ನಡೆಯುವಾಗ ಘಟನೆ ನಡೆದಿದೆಯೆಂಬುದನ್ನು ತಿಳಿಸುತ್ತದೆ;*

*(ii) 2ನೇ ಸಂಖ್ಯೆ ಆಪಾದಿತನಿಗೆ ಗಾಯಗಳಾಗಿದ್ದುದನ್ನು ವಿವರಿಸುವುದನ್ನು ಹೊರತುಪಡಿಸಿದರೆ, 1 ರಿಂದ 8ರ ವರೆಗಿನ ಹಾಗೂ 13ನೇ ಪ್ರಾಥಮಿಕ ಸಾಕ್ಷಿದಾರರು ಹೇಗೆ 2 ರಿಂದ 4 ರ ವರೆಗಿನ ಆಪಾದಿತರಿಗೆ ಗಾಯಗಳಾಗಿದ್ದವೆಂಬ ಬಗ್ಗೆ ಯಾವುದೇ ವಿವರಣೆ ನೀಡಿಲ್ಲ.*

*(iii) 4ನೇ ಸಂಖ್ಯೆಯ ಆಪಾದಿತನು ಪ್ರಾ.ಸಾ.3ರ ವಿರುದ್ಧ ಮಾಲೂರು ಪೊಲೀಸು ಠಾಣೆಗೆ ಎದುರು ದೂರನ್ನು, 1995ರ ಅಪರಾಧ ಸಂಖ್ಯೆ.112 ಎಂದು ದಾಖಲು ಮಾಡಿದ್ದು, ಇದರಲ್ಲಿ, ಬಿ–ಅಂತಿಮ ವರದಿಯನ್ನು ಜೆ.ಎಂ.ಎಫ್.ಸಿ ಮಾಲೂರಿಗೆ 1999ರಲ್ಲಿ ಸಲ್ಲಿಸಲಾಗಿತ್ತು. ಪ್ರಾಸಿಕ್ಯೂಷನ್ನು, ಬಿ ಸಾರಾಂಶ ವರದಿಯನ್ನು ಸಲ್ಲಿಸಲಾದಂಥ ಸನ್ನಿವೇಶಗಳನ್ನು ವಿವರಿಸಿಲ್ಲ.*

*(iv) ಆಪಾದಿತರಿಗೆ ಆದ ಗಾಯಗಳ ಬಗ್ಗೆ ಪ್ರಾಸಿಕ್ಯೂಷನ್ ಸಾಕ್ಷಿದಾರರು ವಿವರಣೆಯನ್ನು ನೀಡದಿರುವುದು ಅವರ ಸಾಕ್ಷ್ಯದ "ನಂಬಿಕೆ ಕಳೆದುಕೊಂಡಿದೆ" ಹಾಗೂ ಪ್ರಾಸಿಕ್ಯೂಷನ್ ಸಾಕ್ಷಿದಾರರು ಸತ್ಯವನ್ನು ಮುಚ್ಚಿಟ್ಟಿರುವರು ಎಂಬ ಊಹೆಯನ್ನು ಮಾಡಿಕೊಳ್ಳಲೇಬೇಕಾಗುತ್ತದೆ;*

*(v) ಪ್ರಾ.ಸಾ.20 ಡಾ॥ ಕೆ. ಶ್ರೀನಿವಾಸನ್‌ರವರ ಸಾಕ್ಷ್ಯವು, ಕೃಷ್ಣಪ್ಪನಿಗೆ ಬಲ ಹೆಗಲ ಮೂಳೆಯಿಂದ ಕೆಳಭಾಗದ ಎಡ ಹೆಗಲ ಅಂಚಿನವರೆಗೆ ಗಾಯಗಳಾಗಿವೆಯೆಂಬುದನ್ನು ಸೂಚಿಸುತ್ತದೆ. ಮೃತನು 6 ಅಡಿ ಎತ್ತರವಿದ್ದುದರಿಂದ 5.1 ಅಡಿ ಎತ್ತರವಿದ್ದ 1ನೇ ಸಂಖ್ಯೆ ಆಪಾದಿತನು ಮುದ್ದೆಮಾಲು 5 ರಂಥ ಆಯುಧದಿಂದ ಹೊಡೆದರೆ, ಗಾಯದ ಸ್ವರೂಪ ಓರೆಯಾಗಿರುತ್ತದೆಯೇ ಹೊರತು ಲಂಭವಾಗಿರುವುದಿಲ್ಲ.*

*(vi) ತನಿಖಾಧಿಕಾರಿ ವಿಶ್ಲೇಷಣೆಗಾಗಿ ರಕ್ತಕಲೆಯ ಮಣ್ಣನ್ನು ಸಂಗ್ರಹಿಸಿಲ್ಲ.*

*(vii) ಪ್ರಾಸಿಕ್ಯೂಷನ್‌ನ ವಾದ ಏನೆಂದರೆ, ಕೃಷ್ಣಪ್ಪನನ್ನು ಬಾಕುವಿನಿಂದ ತಿವಿಯಲಾಗಿದೆ ಎಂಬುದಾಗಿರುವಾಗ, ಅವನನ್ನು ತಿವಿಯಲು ಬಳಸಲಾಗಿದೆಯೆಂದು ಹೇಳಲಾಗಿರುವ ಮುದ್ದೆಮಾಲು 5 ಎಂದು ಗುರುತುಹಾಕಿದ್ದ ಬಾಕು ಅಥವಾ ಕಠಾರಿಯನ್ನು ಏನೆಂದು ವಶಪಡಿಸಿಕೊಳ್ಳಲಾಗಿದೆ; ಹಾಗೂ*

*(vii) ಪ್ರತ್ಯಕ್ಷ ಸಾಕ್ಷಿದಾರರಲ್ಲಿ ಒಬ್ಬರಾಗಿದ್ದ ಆ.ಸಾ.29ನ್ನು ವಿಚಾರಣೆ ಮಾಡಿಲ್ಲ. ಅಷ್ಟೇ ಅಲ್ಲದೆ, ಪ್ರಾ.ಸಾ.3 ಹಾಗೂ ಪ್ರಾ.4ರ ಸಾಕ್ಷ್ಯದಲ್ಲಿ ಕೆಲವು ವಿರೋಧಾಭಾಸಗಳಿದ್ದವು.*

8. ತನ್ನ ತೀರ್ಪನ್ನು ನೀಡಿರುವ ಕ್ರಮದಲ್ಲಿ ನ್ಯಾಯಾಲಯವು, ತತ್ವಗಳನ್ನು ಪ್ರಸ್ತಾಪಿಸಿದ್ದು ಅದು ಈ ಮುಂದಿನ ನಿಬಂಧನೆಗಳಲ್ಲಿ ಅವುಗಳನ್ನು ರೂಪಿಸಿ ಖುಲಾಸೆ ವಿರುದ್ಧ ಅಪೀಲನ್ನು ಅನುಸರಿಸಲು ಅಗತ್ಯಪಡಿಸಿತ್ತು:

> *"1. ಖುಲಾಸೆ ವಿರುದ್ಧದ ಅಪೀಲಿನಲ್ಲಿ, ಅಪೀಲು ನ್ಯಾಯಾಲಯವು, ತಾನು ವಿಚಾರಣೆ ನಡೆಸಿದ ಮೊಕದ್ದಮೆಯಲ್ಲಿ ನ್ಯಾಯದ ವಿಫಲತೆಯು ಕಂಡುಬಂದ ಹೊರತು, ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ವಿರ್ಪಯಗೊಳಿಸುವಲ್ಲಿ ನಿಧಾನಗತಿಯಲ್ಲಿದೆ.*
>
> *2. ಎರಡು ದೃಷ್ಟಿಕೋನಗಳಲ್ಲಿ ದಾಖಲೆಯಲ್ಲಿರುವ ಸಾಕ್ಷ್ಯವನ್ನು ಹಾಗೂ ಅಧಿವಿಚಾರಣಾ ನ್ಯಾಯಾಲಯವು ತೆಗೆದುಕೊಂಡ ಸಮಾನವಾಗಿ ಬೆಣ್ಣೆಯ ಮಾತಿನಂಥ ದೃಷ್ಟಿಕೋನವನ್ನು ಆಧರಿಸಿದ್ದರೂ ಕೂಡ ಖುಲಾಸೆ ಆದೇಶದಲ್ಲಿ ಅಪೀಲು ನ್ಯಾಯಾಲಯವು ಹಸ್ತಕ್ಷೇಪ ಮಾಡಲಾಗಿಲ್ಲ.*
>
> *3. ಅಪೀಲು ನ್ಯಾಯಾಲಯವು, ಅಧಿವಿಚಾರಣಾ ನ್ಯಾಯಾಲಯವು ಸಾಕ್ಷ್ಯ ಮೌಲ್ಯಮಾಪನವನ್ನು ಸಾಕ್ಷ್ಯವಿಲ್ಲದೆ ಅಥವಾ ವಿಚಿತ್ರವಾಗಿ ಮಾಡಿದೆ ಅಥವಾ ನ್ಯಾಯದ ಹಿತಾಸಕ್ತಿಗೆ ವಿರುದ್ಧವಾಗಿ ಮಾಡಿದೆಯೆಂದು ಗುರುತಿಸಿದರೆ ಮಾತ್ರ ಅಪೀಲು ನ್ಯಾಯಾಲಯವು ಖುಲಾಸೆ ಆದೇಶವನ್ನು ವಿಪರ್ಯಯಗೊಳಿಸಲು ಪ್ರಯತ್ನಿಸುತ್ತದೆ.*
>
> *4. ಸಾಕ್ಷ್ಯವನ್ನು ಮೌಲ್ಯಮಾಪನ ಮಾಡಿದ ನಂತರ, ಅಪೀಲು ನ್ಯಾಯಾಲಯವು, ಸ್ವತಂತ್ರವಾಗಿ, ಖುಲಾಸೆ ಆದೇಶವು ಕಾನೂನಿಗನುಸಾರವಿಲ್ಲವೆಂದು ಕಂಡುಕೊಂಡಿದೆ ಮತ್ತು ಅಧಿವಿಚಾರಣಾ ನ್ಯಾಯಾಲಯವು, ದಾಖಲೆಯಲ್ಲಿರುವ ಸಾಕ್ಷ್ಯದ ಸರಿಯಾದ ಮೌಲ್ಯಮಾಪನವನ್ನು ಆಧರಿಸಿಲ್ಲವೆಂಬುದು ಕಂಡು ಬಂದಿದೆ, ಆಪಾದಿತನ ತಪ್ಪಿತವನ್ನು ಹೊರತುಪಡಿಸಿದ ಘಟನೆಯನ್ನು ವಿವರಿಸಲಾಗುವುದಿಲ್ಲವೆಂದು ಹಾಗೂ ಆಪಾದಿತನ ಮುಗ್ಧತೆಗೆ ಒಟ್ಟಾರೆಯಾಗಿ ಸುಸಂಗತವಾಗಿಲ್ಲವೆಂದು*

*ಗುರುತಿಸಿದರೆ ಅಂಥ ಸಂದರ್ಭಗಳಲ್ಲಿ ಮಾತ್ರ ಅಪೀಲು ನ್ಯಾಯಾಲಯವು ಖುಲಾಸೆ ಆದೇಶವನ್ನು ವಿಪರ್ಯಯಗೊಳಿಸಬಹುದು".*

9. ದಾಖಲೆಯಲ್ಲಿರುವ ಸಾಕ್ಷ್ಯವನ್ನು ವಿಶ್ಲೇಷಿಸಿದ ನಂತರ ಉಚ್ಚ ನ್ಯಾಯಾಲಯವು, ಪ್ರಾ.ಸಾ.1ರ ಆವೃತ್ತಿಯು ನಿರ್ದಿಷ್ಟವಾಗಿ, ಮಾರಕಾಯುಧಗಳು ಇತ್ತೆಂದು ಹಾಗೂ 2ನೇ ಸಂಖ್ಯೆಯ ಆಪಾದಿತನ ಕೈಯಲ್ಲಿ ಸ್ಫೋಟಕ ಸಾಮಗ್ರಿಯಿತ್ತೆಂದು ಅಭಿಪ್ರಾಯಪಟ್ಟಿದೆ. ಅಷ್ಟೇ ಅಲ್ಲದೆ, 2ನೇ ಸಂಖ್ಯೆಯ ಆಪಾದಿತನು ಗಾಯಗೊಂಡಿದ್ದನೆಂದು ಅವನ ಬಳಿಯಿದ್ದ ಸ್ಫೋಟಕ ಸಾಮಗ್ರಿಗಳು ಸಿಡಿದು ಅವನು ಓಡಿಹೋಗಿದ್ದರಿಂದ ಅವನಿಗೆ ಗಾಯಗಳಾಗಿದ್ದವೆಂದು ನಿರ್ದಿಷ್ಟವಾಗಿ ತಿಳಿಸಿತ್ತು. ಉಚ್ಚ ನ್ಯಾಯಾಲಯದ ದೃಷ್ಟಿಯಲ್ಲಿ ಗಾಯಗೊಂಡ ಪ್ರತ್ಯಕ್ಷ – ಸಾಕ್ಷಿದಾರರು ಎಂದರೆ ಪ್ರಾ.ಸಾ.3, 5, 6 ಹಾಗೂ 7ನೇ ಸಾಕ್ಷಿದಾರರ ಸಾಕ್ಷ್ಯವು ಪ್ರತಿಯೊಬ್ಬ ಆಪಾದಿತನ ಗೋಚರ ಕೃತ್ಯಗಳನ್ನು ಪ್ರಸ್ತಾಪಿಸಿದ್ದಾರೆ. ಪ್ರಾ.ಸಾ.2, 4, 8 ಹಾಗೂ 13, ಘಟನೆಯ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದಾರೆ. ಗಾಯಗೊಂಡ ಪ್ರತ್ಯಕ್ಷ ಸಾಕ್ಷಿದಾರರ ಸಾಕ್ಷ್ಯವನ್ನು, ಹಗುರವಾಗಿ ತಳ್ಳಿಹಾಕಲಾಗುವುದಿಲ್ಲ. ಉಚ್ಚ ನ್ಯಾಯಾಲಯವು, ಅಪರಾಧ ನಡೆದ ಸಮಯದಲ್ಲಿ ಗಾಯಗೊಂಡ ಸಾಕ್ಷಿದಾರರು ಯಾರೂ ಯಾವುದೇ ಆಯುಧಗಳನ್ನು ಹೊಂದಿರಲಿಲ್ಲವೆಂಬುದನ್ನು ಗಮನಿಸಿದೆ. ಮತ್ತೊಂದು ಕಡೆ ಆಪಾದಿತರು ಬಾಕು, ಚಾಕು, ಸೈಕಲ್ ಚೈನನ್ನು ಹಾಗೂ ದೊಣ್ಣೆಗಳನ್ನು ಒಳಗೊಂಡಂತೆ ಆಯುಧಗಳನ್ನು ಇಟ್ಟುಕೊಂಡಿದ್ದರು. ಹೀಗಾಗಿ, ಆಪಾದಿತರು ಅಪರಾಧ ನಡೆದ ದಿನಾಂಕದಂದು ಘಟನೆಯಲ್ಲಿ ಭಾಗಶಃ ಭಾಗಿಗಳಾಗಿದ್ದರು ಎಂಬುದನ್ನು ಇದು ರುಜುವಾತುಪಡಿಸುತ್ತದೆ. ಇಬ್ಬರು ವ್ಯಕ್ತಿಗಳ ಸಾವಿಗೆ ಹಾಗೂ ಇತರ ನಾಲ್ಕು ಜನರು ಗಾಯಗೊಳ್ಳಲು ಕಾರಣವಾಗಿದೆ ಎಂಬುದನ್ನು ಆಪಾದಿತನ ಗಾಯವನ್ನು ವಿವರಿಸಲು ಪ್ರಾಸಿಕ್ಯೂಷನ್ನು ಆಪಾದಿತವಾಗಿ ವಿಫಲವಾಗಿರುವ ಸಂಬಂಧದಲ್ಲಿ, ಉಚ್ಚ ನ್ಯಾಯಾಲಯವು 2ನೇ ಸಂಖ್ಯೆಯ ಆಪಾದಿತನು ಗಾಯಗೊಂಡಿರುವುದನ್ನು ಪ್ರಥಮ ಮಾಹಿತಿ ವರದಿ ಪ್ರಸ್ತಾವಿಸಿರುವುದನ್ನು ಗಮನಿಸಿದೆ. ಗಾಯಗೊಂಡ ಇತರ ಆಪಾದಿತನಿಗೆ ಸಂಬಂಧಿಸುವಷ್ಟರಮಟ್ಟಿಗೆ ಪೊಲೀಸರು ಬಿ–ವರದಿಯನ್ನು ಸಲ್ಲಿಸಿದ್ದು, ಅದನ್ನು ದಂಡಾಧಿಕಾರಿಯವರು ಅಂಗೀಕರಿಸಿದ್ದು, ಆಪಾದಿತನು ಅದನ್ನು ಮುಂದುವರಿಸಿರಲಿಲ್ಲ. ಆಪಾದಿತನ ಖುಲಾಸೆಯನ್ನು ವಿಪರ್ಯಯಗೊಳಿಸುವಾಗ,

ಆದಾಗ್ಯೂ, ಉಚ್ಚ ನ್ಯಾಯಾಲಯವು, ಆಪಾದಿತನ ಕಡೆ ಹಾಗೂ ಮೃತರ ಕುಟುಂಬದವರ ನಡುವೆ ಬದ್ಧ ವೈರತ್ವವಿತ್ತು. ಇದರ ಫಲಿತಾಂಶವಾಗಿ, ಜಗಳ ನಡೆದಿದೆ ಹಾಗೂ ಮೃತನನ್ನು ಸಾಯಿಸಬೇಕೆನ್ನುವ ಉದ್ದೇಶದಿಂದ ಮಾಡಿರುವುದರಿಂದ ಅಪರಾಧ ಮಾಡಿರುವನೆಂಬುದಕ್ಕೆ ಅಪರಾಧ ಸಂಬಂಧಪಡುವುದಿಲ್ಲ ಎಂಬುದನ್ನು ಗಮನಿಸಿದೆ. ತನ್ನ ಅಭಿರಕ್ಷೆಯಲ್ಲಿದ್ದ ಆಯುಧಗಳ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡು ಆಪಾದಿತನು, ಕೆಂಚಪ್ಪ ಹಾಗೂ ಕೃಷ್ಣಪ್ಪರ ಸಾವಿಗೆ ತಮ್ಮ ಕೃತ್ಯಗಳು ಕಾರಣವಾಗುತ್ತವೆ ಎಂಬ ಜ್ಞಾನವನ್ನು ಆಪಾದಿತನು ಹೊಂದಿದ್ದನು ಎಂದು ಉಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ. ಹೀಗಾಗಿ 304ನೇ ಪ್ರಕರಣದ ಭಾಗ 1ರ ಮೇರೆಗೆ ಅಪರಾಧ ನಿರ್ಣಯವನ್ನು ಆದೇಶಿಸಿತ್ತು, ಅಲ್ಲದೆ 149ನೇ ಪ್ರಕರಣದೊಂದಿಗೆ ಓದಲಾದ 324ನೇ ಪ್ರಕರಣದ ಮೇರೆಗೆ ಎರಡೂ ಅಪರಾಧ ನಿರ್ಣಯವನ್ನು ಆದೇಶಿಸಿತ್ತು.

10. ಆಪಾದಿತ ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ಹಿರಿಯ ವಕೀಲರಾದ ಶ್ರೀ ವಿ. ಕೃಷ್ಣಮೂರ್ತಿಯವರು, ಉಚ್ಚ ನ್ಯಾಯಾಲಯದ ತೀರ್ಪನ್ನು ಖಂಡಿಸಿದ್ದು ಈ ಮುಂದಿನ ನಿವೇದನೆಗಳನ್ನು ಮಂಡಿಸಿದ್ದಾರೆ:

> *(i) ಖುಲಾಸೆ ವಿರುದ್ಧದ ಅಪೀಲಿನಲ್ಲಿ, ಉಚ್ಚ ನ್ಯಾಯಾಲಯವು, ಅಧಿವಿಚಾರಣಾ ನ್ಯಾಯಾಲಯದ ತೀರ್ಪನಲ್ಲಿ ವ್ಯತಿರಿಕ್ತತೆಯಾಗಿಯಾಗಲಿ ಅಥವಾ ನ್ಯಾಯ ವಿಫಲವಾಗಿರುವುದನ್ನು ಗುರುತಿಸಿಲ್ಲ. ಅಧಿವಿಚಾರಣಾ ನ್ಯಾಯಾಲಯವು ಆಪಾದಿತನನ್ನು ಖುಲಾಸೆಗೊಳಿಸುವ ಮೂಲಕ ನಿರ್ದೋಷತ್ವದ ಪೂರ್ವಭಾವನೆಯನ್ನು ಹೊಂದಿದೆ;*
>
> *(ii) ಉಚ್ಚ ನ್ಯಾಯಾಲಯವು, ಖುಲಾಸೆ ವಿರುದ್ಧದ ಅಪೀಲನ್ನು ರೂಪಿಸುವ ಸುಸ್ಥಾಪಿತ ತತ್ವವನ್ನು ಉಲ್ಲಂಘಿಸಿದೆ; ಹಾಗೂ*
>
> *(iii) 2, 3, 4 ಹಾಗೂ 5ನೇ ಸಂಖ್ಯೆಯ ಆಪಾದಿತರು, ಘಟನೆ ನಡೆದ ಸಂದರ್ಭದಲ್ಲಿ ಗಂಭೀರವಾಗಿ ಗಾಯಗೊಂಡಿರುವುದನ್ನು ಸಾಕ್ಷ್ಯ*

*ಸೂಚಿಸುತ್ತದೆ. 2ನೇ ಸಂಖ್ಯೆಯ ಆಪಾದಿತನಿಗೆ ಆಗಿರುವ ಗಾಯದ ವಿವರಣೆಯನ್ನು ಹೊರತುಪಡಿಸಿ, ಪ್ರಾಸಿಕ್ಯೂಷನ್ನು, ಉಳಿದ ಆಪಾದಿತ ವ್ಯಕ್ತಿಗಳೆಲ್ಲರಿಗೆ ಆದ ಗಾಯಗಳನ್ನು ವಿವರಿಸಲು ವಿಫಲವಾಗಿದೆ. ಇದು ಗಂಭೀರ ಲೋಪವಾಗಿದ್ದು, ಪ್ರಾಸಿಕ್ಯೂಷನ್ನು ಪ್ರತಿಪಾದಿಸಿದ ತತ್ವವು ಸಂದೇಹವನ್ನು ಉಂಟುಮಾಡುತ್ತದೆ.* ***ಲಕ್ಷ್ಮಿ ಸಿಂಗ್ – ವಿರುದ್ಧ – ಬಿಹಾರ ರಾಜ್ಯ (ಲಕ್ಷ್ಮಿ ಸಿಂಗ್)*** *ಪ್ರಕರಣದಲ್ಲಿ ಈ ನ್ಯಾಯಾಲಯದ ನಿರ್ಣಯವು, ಆಪಾದಿತರು ಖುಲಾಸೆ ಹಕ್ಕನ್ನು ಹೊಂದಿರುವವರು ಎನ್ನುವ ಆಧಾರದ ಒಂದು ವೇದಿಕೆಯನ್ನು ರೂಪಿಸುತ್ತದೆ.*

11. ಮತ್ತೊಂದು ಕಡೆ, ರಾಜ್ಯದ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಈ ಮುಂದಿನ ನಿವೇದನೆಗಳನ್ನು ಮಂಡಿಸಿದ್ದಾರೆ:

*(i) ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ಆಪಾದಿತರಿಗೆ ಆದ ಗಾಯಗಳನ್ನು ವಿವರಿಸದಿರುವುದನ್ನು ಊಹಾತ್ಮಕವಾಗಿ ಪ್ರಾಥಮಿಕವಾಗಿ ರೂಪಿಸಲಾಗಿದೆ. ನಾಲ್ಕು ಜನ ಗಾಯಗೊಂಡ ಆಪಾದಿತರಲ್ಲಿ 2ನೇ ಆಪಾದಿತನು ಸ್ಫೋಟಕ ಸಾಮಗ್ರಿಯನ್ನು ಇಟ್ಟುಕೊಂಡಿದ್ದು, ಅದನ್ನು ಅವನು ಕೊಂಡೊಯ್ಯುತ್ತಿದ್ದಾಗ ಗಾಯಗೊಂಡಿದ್ದನೆಂಬುದನ್ನು ಸಾಕ್ಷ್ಯವು ವಿಶದವಾಗಿ ವಿವರಿಸಿದೆ;*

*(ii) ಇತರ ಆಪಾದಿತರು ಗಾಯಗೊಂಡಿರುವುದಕ್ಕೆ ಸಂಬಂಧಿಸಿದಂತೆ ಅವರಿಗೆ ಗಾಯಗಳು ಸಣ್ಣಪುಟ್ಟ ಸ್ವರೂಪದವುಗಳಾಗಿವೆ. ಅಲ್ಲದೆ,* ***ಲಕ್ಷ್ಮಿ ಸಿಂಗ್ (ಮೇಲಿನ)*** *ಪ್ರಕರಣದಲ್ಲಿನ ನಂತರದ ನಿರ್ಣಯದ ನಂತರದ ಈ ನ್ಯಾಯಾಲಯದ ತೀರ್ಪುಗಳನ್ನು ಆಪಾದಿತ ಅಪೀಲುದಾರರು ಅವಲಂಬಿಸಿದ್ದು, ಆಪಾದಿತನು ಗಾಯಗೊಂಡಿರುವುದು ಏನಾದರೂ ಇದ್ದರೆ ಪ್ರತಿಯೊಂದು ಗಾಯವನ್ನು ವಿವರಿಸಲು ಪ್ರಾಸಿಕ್ಯೂಷನ್ನು ಬದ್ಧವಾಗಿರಬೇಕೆಂಬುದನ್ನು ಹಾಗೂ ನಿರ್ಣಯವು, ಆಪಾದಿತನು ತಂದಿದ್ದ ಆಯುಧಗಳ ಸ್ವರೂಪವನ್ನು ಒಳಗೊಂಡಂತೆ ಸಂಗತಿಗಳು ಹಾಗೂ ಸನ್ನಿವೇಶಗಳನ್ನು ರೂಪಿಸಬೇಕು;*

*(iii) ಅಧಿವಿಚಾರಣಾ ನ್ಯಾಯಾಲಯದ ತೀರ್ಪು, ವಿಕೃತತೆಯಿಂದ ಕೂಡಿದೆ. ಅಲ್ಲದೆ, ಮೇಲೆ ಪ್ರಸ್ತಾಪಿಸಲಾದಂತೆ ಕಾನೂನು ಸ್ಥಾನಮಾನವನ್ನು ಮೌಲ್ಯಮಾಪನ ಮಾಡುವಲ್ಲಿ ಸ್ಪಷ್ಟವಾಗಿ ದೋಷವೆಸಗಿದ್ದು, ಅಧಿವಿಚಾರಣಾ ನ್ಯಾಯಾಲಯವು, ಗಾಯಗೊಂಡ ಪ್ರತ್ಯಕ್ಷ ಸಾಕ್ಷಿದಾರರ ಲೆಕ್ಕಗಳನ್ನು ಸ್ಪಷ್ಟ ಹಾಗೂ ಸಮುಚಿತವಾದ ರೀತಿಯಲ್ಲಿ ಸರಿಯಾಗಿ ನಿರ್ಧರಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುತ್ತದೆ; ಹಾಗೂ*

*(iv) ಗಾಯಗೊಂಡ ಪ್ರತ್ಯಕ್ಷ ಸಾಕ್ಷಿದಾರರು ಹಾಗೂ ಪ್ರಾ.ಸಾ.1 ಘಟನೆಯ ಸ್ವರೂಪ ಹಾಗೂ ಮೂಲದ ಸುಸಂಗತ ಲೆಕ್ಕವನ್ನು ಹಾಗೂ ಆಪಾದಿತರ ಪಾತ್ರವನ್ನು ನೀಡಿದ್ದಾರೆ. ಉಚ್ಚ ನ್ಯಾಯಾಲಯವು ಈ ಸನ್ನಿವೇಶಗಳಲ್ಲಿ, ಖುಲಾಸೆಯ ತೀರ್ಪನ್ನು ವಿಪರ್ಯಯಗೊಳಿಸಿರುವುದು ಸಂಪೂರ್ಣವಾಗಿ ನ್ಯಾಯಸಮ್ಮತವಾಗಿದೆ.*

12. ದೂರುದಾರ ಪ್ರಾ.ಸಾ.1ರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಶೇಖರ್ ಜಿ. ದೇವಸ ರವರು ರಾಜ್ಯದ ಪರವಾಗಿ ವಾದಿಸಿರುವ ನಿವೇದನೆಗಳನ್ನು ಬೆಂಬಲಿಸಿದ್ದು, ಅದನ್ನು ಹೀಗೆ ನಿವೇದಿಸಲಾಗಿದೆ:

*(i) ಪ್ರಾ.ಸಾ.1ರ ಸಾಕ್ಷ್ಯವನ್ನು ಹೊರತುಪಡಿಸಿದ, ಅಧಿವಿಚಾರಣಾ ನ್ಯಾಯಾಲಯವು ಗಾಯಗೊಂಡಿದ್ದ ನಾಲ್ಕು ಜನ (ಪ್ರಾ.ಸಾ.3, 5, 6 ಹಾಗೂ 7)ರನ್ನು ಒಳಗೊಂಡಂತೆ ಒಂಬತ್ತು ಜನ ಸಾಕ್ಷಿದಾರರನ್ನು ಸರಿಯಾಗಿ ಮೌಲ್ಯಮಾಪನ ಮಾಡಿಲ್ಲ;*

*(ii) ಈ ನ್ಯಾಯಾಲಯದ ತರುವಾಯದ ನಿರ್ಣಯಗಳು ಕಾನೂನಿನಲ್ಲಿರುವ ಸ್ಥಾನವನ್ನು ಸ್ಪಷ್ಟಪಡಿಸಿವೆ ಹಾಗೂ ಆಪಾದಿತರಿಗೆ ಆಗಿರುವ ಗಾಯಗಳನ್ನು ವಿವರಿಸಲು ಪ್ರಾಸಿಕ್ಯೂಷನ್ ಕಡೆಯಿಂದ ವಿಫಲತೆ ಆಗಿದೆಯೇ ಎಂಬ ಪ್ರಶ್ನೆಯನ್ನು ಗಾಯಗಳ ಆಪಾದಿತರು ಬಳಸಿದ ಆಯುಧಗಳ ಸ್ವರೂಪದ ಸಂದರ್ಭದಲ್ಲಿ ಹಾಗೂ ಎಲ್ಲಾ ಸಂಬಂಧಿತ*

*ಸಂಗತಿಗಳು ಹಾಗೂ ಸನ್ನಿವೇಶಗಳನ್ನು ಮೌಲ್ಯಮಾಪನ ಮಾಡಲೇಬೇಕು ಎಂಬುದು ಈಗಾಗಲೇ ಸುಸ್ಥಾಪಿತವಾದುದಾಗಿದೆ.*

*(iii) ವಾಸ್ತವಾಗಿ ಪ್ರಸ್ತುತ ಪ್ರಕರಣವು 304ನೇ ಪ್ರಕರಣ ಭಾಗ–I ರ ಅನ್ವಯವನ್ನು ಸಮರ್ಥಿಸಿರುವುದಿಲ್ಲ ಹಾಗೂ ಸಂಹಿತೆಯ 302ನೇ ಪ್ರಕರಣದ ಮೇರೆಗಿನ ಅಪರಾಧದ ಸ್ಪಷ್ಟ ಪ್ರಕರಣವೆಂದು ಇದನ್ನು ರೂಪಿಸಲಾಗಿದೆ ಹಾಗೂ*

*(iv) ಉಚ್ಚ ನ್ಯಾಯಾಲಯವು, ಸಂಹಿತೆಯ 149ನೇ ಪ್ರಕರಣದ ಉಪಬಂಧಗಳನ್ನು ಸರಿಯಾಗಿ ಅನ್ವಯಿಸಿದೆ ಹಾಗೂ ಸಾಮಾನ್ಯ ವಸ್ತುವಿಷಯವು ದಾಖಲೆಯಲ್ಲಿರುವ ಸಾಕ್ಷ್ಯದ ಆಧಾರದಲ್ಲಿ ಹೊರಹೊಮ್ಮಿದೆ.*

13. ಪ್ರತಿವಾದದ ನಿವೇದನೆಗಳನ್ನು ವಿಶ್ಲೇಷಣೆಗಾಗಿ ಇಲ್ಲಿ ನೀಡಲಾಗಿದೆ:

14. ಪ್ರಸ್ತುತ ಪ್ರಕರಣದಲ್ಲಿ ಉಚ್ಚ ನ್ಯಾಯಾಲಯವು, ಖುಲಾಸೆಯ ವಿರುದ್ಧದ ಅಪೀಲಿಗೆ ಸಂಬಂಧಪಟ್ಟಂತೆ ವ್ಯವಹರಿಸಿದೆ. ಅಂಥ ಸಂದರ್ಭದಲ್ಲಿ, ಉಚ್ಚ ನ್ಯಾಯಾಲಯವು, ವಿಭಿನ್ನ ದೃಷ್ಟಿಕೋನವು ಸಾಧ್ಯವಾಗುವ ಅಥವಾ ಆದ್ಯತೆಯಾಗುವ ಅಭಿಪ್ರಾಯ ಹೊಂದಿರುವ ಕಾರಣ ಮಾತ್ರದಿಂದ ಖುಲಾಸೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಮತ್ತೊಂದು ಕಡೆ ಉಚ್ಚ ನ್ಯಾಯಾಲಯವು, ಅಂಥ ಸಂದರ್ಭದಲ್ಲಿ ಸುಸ್ಥಾಪಿತ ತತ್ವಗಳನ್ನು ರೂಪಿಸುತ್ತದೆ. ಈ ತತ್ವಗಳ ಪ್ರಕಾರ, ಅಧಿವಿಚಾರಣಾ ನ್ಯಾಯಾಲಯವು ಸಾಕ್ಷ್ಯದ ಮೌಲ್ಯಮಾಪನವನ್ನು ಮನಬಂದಂತೆ ಮಾಡಿದಲ್ಲಿ ಅಥವಾ ಅದರ ನಿರ್ಣಯಕ್ಕೆ ಸಾಕ್ಷ್ಯವಿಲ್ಲದಿದ್ದಲ್ಲಿ ಉಚ್ಚ ನ್ಯಾಯಾಲಯವು ಖುಲಾಸೆಯ ಆದೇಶವನ್ನು ವಿಪರ್ಯಯಗೊಳಿಸಬಹುದು. ಉಚ್ಚ ನ್ಯಾಯಾಲಯವು ತಾನು ಖುಲಾಸೆ ಆದೇಶವು ಕಾನೂನಿಗೆ ಅನುಸಾರವಾಗಿಲ್ಲವೆಂದು ಗುರುತಿಸಿದಲ್ಲಿ ಹಾಗೂ ಅಧಿವಿಚಾರಣಾ ನ್ಯಾಯಾಲಯದ ದೃಷ್ಟಿಕೋನವು ನ್ಯಾಯದ ವಿಫಲತೆಗೆ ಕಾರಣವಾಗಿದೆಯೆಂದು ಗುರುತಿಸಿದಲ್ಲಿ ಅದು ಹಸ್ತಕ್ಷೇಪ ಮಾಡಿ

ಸಮರ್ಥಿಸಿಕೊಳ್ಳಬಹುದು. ಆದಾಗ್ಯೂ ಉಚ್ಚ ನ್ಯಾಯಾಲಯವು, ಆಪಾದಿತನ ತಪ್ಪಿತದ ಆಧಾರವನ್ನು ಹೊರತುಪಡಿಸಿ, ಘಟನೆಯನ್ನು ವಿವರಿಸಲು ಸಾಧ್ಯವಿಲ್ಲ ಎಂದು ಹಾಗೂ ಅದರ ನಿರ್ದೋಷತೆಗೆ ಸುಸಂಗತವಾಗಿಲ್ಲವೆಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು.

15. ಪ್ರಸ್ತುತ ಪ್ರಕರಣದಲ್ಲಿ, ಕೃಷ್ಣಪ್ಪನ ಮಗಳಾಗಿರುವ ಪ್ರಾ.ಸಾ.1 ಇಬ್ಬರು ಸಹೋದರರ ಕುಟುಂಬಗಳ ನಡುವೆ ದೀರ್ಘಕಾಲದ ವಿವಾದವಿತ್ತೆಂದು ಹೇಳಿಕೆ ನೀಡಿದ್ದಾಳೆ; ಬಚ್ಚಪ್ಪ (5ನೇ ಸಂಖ್ಯೆಯ ಆಪಾದಿತ) ಹಾಗೂ ಗೋಪಾಲಪ್ಪ (ಆ.ಸಾ.29). ವ್ಯಾಜ್ಯ ನಡೆದಿತ್ತು. ಘಟನೆ ನಡೆದ ದಿನಾಂಕದಂದು, ಬೆಳಿಗ್ಗೆ ಸುಮಾರು 8.30ರಲ್ಲಿ ಮಾಪನ ಇಲಾಖೆಯ ಅಧಿಕಾರಿಗಳು ಸಮೀಕ್ಷೆಯನ್ನು ನಡೆಸುತ್ತಿತ್ತು. ಆ.ಸಾ.29ರ ಮನೆಯನ್ನು ಸಮೀಕ್ಷೆ ಮಾಡಿದ ನಂತರ ಅವರು, ಅವನ ಸಹೋದರ 5ನೇ ಸಂಖ್ಯೆಯ ಆಪಾದಿತನ ಮನೆಗೆ ಹೋದರು. 5ನೇ ಸಂಖ್ಯೆಯ ಆಪಾದಿತನು ಸಮೀಕ್ಷೆಯನ್ನು ವಿರೋಧಿಸಿ ಅಡ್ಡ ಬಂದನು, ಈ ಹಂತದಲ್ಲಿ ಕೃಷ್ಣಪ್ಪ ಹಾಗೂ 5ನೇ ಸಂಖ್ಯೆಯ ಆಪಾದಿತನ ನಡುವೆ ವಾಗ್ಯುದ್ಧ ನಡೆಯಿತು. ವಾಕ್ ಸಮರದ ಕಾರಣದಿಂದಾಗಿ ಸಮೀಕ್ಷೆ ಅಧಿಕಾರಿಗಳು ಸ್ಥಳವನ್ನು ಬಿಟ್ಟಿದ್ದಾರೆ. ತದನಂತರ, ಮಧ್ಯಾಹ್ನಕ್ಕು ಮೊದಲು, ಆಪಾದಿತನು, ಮಾರಾಕಾಸ್ತ್ರಗಳೊಂದಿಗೆ ಸ್ಥಳಕ್ಕೆ ಹಿಂದಿರುಗಿದ್ದಾನೆ. 1ನೇ ಸಂಖ್ಯೆಯ ಆಪಾದಿತಳು, ತನ್ನ ತಂದೆ ಕೃಷ್ಣಪ್ಪನಿಗೆ ಇರಿದನೆಂದು ಹಾಗೂ 6ನೇ ಸಂಖ್ಯೆಯ ಆಪಾದಿತನು ಸೈಕಲ್ ಚೈನಿನಿಂದ ಥಳಿಸಿದನೆಂದು ಹೇಳಿಕೆ ನೀಡಿದ್ದಾಳೆ. ಇದರ ಪರಿಣಾಮದಿಂದ ಕೃಷ್ಣಪ್ಪನು ರಕ್ತದ ಮಡುವಿನಲ್ಲಿ ಕುಸಿದು ಬಿದ್ದಿದ್ದಾನೆ. ಅವನ ಬಳಿ ನಿಂತುಕೊಂಡಿದ್ದ ಅವನ ಸಹೋದರ ಕೆಂಚಪ್ಪನನ್ನು ಆಪಾದಿತನು ಇರಿದ ಕಾರಣದಿಂದ ಅವನ ಸಣ್ಣ ಕರುಳು ಈಚೆಗೆ ಬಂದಿದೆ. ಪ್ರಾ.ಸಾ.1 ಘಟನೆಯ ಕ್ರಮವನ್ನು ವಿವರಿಸಿದ್ದು, ಈ ರೀತಿಯಲ್ಲಿ ಇನ್ನೊಬ್ಬ ಆಪಾದಿತನು, ಪ್ರಾಸಿಕ್ಯೂಷನ್ ಸಾಕ್ಷಿದಾರರ ಕುಟುಂಬದ ಸದಸ್ಯರನ್ನು ಥಳಿಸಿದನು. 2ನೇ ಸಂಖ್ಯೆಯ ಆಪಾದಿತನು, ಬಾಂಬನ್ನು ಹೊಂದಿದ್ದು, ಆ.ಸಾ.29ರ ಮನೆಯ ಮುಂದಿನ ರಸ್ತೆಯಲ್ಲಿ ಎಸೆದಿದ್ದರ ಪರಿಣಾಮವಾಗಿ, ಶ್ರೀ ರಾಮಪ್ಪನ ಕಣ್ಣುಗಳು, ಮುಖ ಹಾಗೂ ಕೈಗಳು ಸುಟ್ಟುಹೋಗಿವೆ. ಬಾಂಬನ್ನು ಸಿಡಿಸಿದ ನಂತರ 2ನೇ ಸಂಖ್ಯೆಯ ಆಪಾದಿತನು

ಸ್ಥಳದಿಂದ ಓಡಿಹೋಗಲು ಪ್ರಯತ್ನಿಸಿದ್ದಾನೆ. ಈ ಹಂತದಲ್ಲಿ, ಅವನ ಜೇಬಿನಲ್ಲಿದ್ದ ಬಾಂಬು ಸ್ಫೋಟಗೊಂಡಿದ್ದುದರ ಪರಿಣಾಮವಾಗಿ ಅವನಿಗೆ ಗಾಯಗಳಾಗಿವೆ. ಘಟನೆಯನ್ನು ಅನುಸರಿಸಿ, ಮಧ್ಯಾಹ್ನ 12 ಗಂಟೆಯಲ್ಲಿ ಇಬ್ಬರು ಮೃತರನ್ನು ಮಾಲೂರು ಆಸ್ಪತ್ರೆಯಲ್ಲಿ ಸೇರಿಸಲು ಎತ್ತಿನಗಾಡಿಯಲ್ಲಿ ಸಾಗಿಸಲಾಗಿದೆ. ಉಳಿದ ಗಾಯಗೊಂಡ ವ್ಯಕ್ತಿಗಳನ್ನು ಸಹ ಆಸ್ಪತ್ರೆಗೆ ಸಾಗಿಸಲಾಗಿದೆ. ಪ್ರಾ.ಸಾ.1 ದೂರನ್ನು ದಾಖಲಿಸಲು ತನ್ನ ಚಿಕ್ಕಮ್ಮನೊಂದಿಗೆ ಮಾಲೂರು ಪೊಲೀಸು ಠಾಣೆಗೆ ಬಂದಿದ್ದಾಳೆ. ಆಪಾದಿತ ಆಯುಧ ಎಂದರೆ ಬಾಕು ಸಿಕ್ಕಿದ್ದು ಅದನ್ನು ಮುದ್ದೆಮಾಲು 5 ಎಂದು ಗುರುತುಹಾಕಲಾಗಿದೆ. ಪ್ರಾ.ಸಾ.1 ನೀಡಿದ ಘಟನೆಯ ಸಂದರ್ಭದ ಕಾರಣದಿಂದ ಇತರ ಪ್ರತ್ಯಕ್ಷ ಸಾಕ್ಷಿದಾರರ ಸಾಕ್ಷ್ಯಗಳಲ್ಲಿ ಘಟನೆಯನ್ನು ಸ್ಪಷ್ಟೀಕರಿಸಲಾಗಿದೆ. ಅವರ ನಡುವೆ ಪ್ರಾ.ಸಾ.3, 5, 6 ಹಾಗೂ 7 ಇವರು ಗಾಯಗೊಂಡ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದಾರೆ.

16. ಪ್ರಾ.ಸಾ.1ರ ಜೊತೆ, ಪ್ರಾ.ಸಾ. 2 ರಿಂದ 8 ಹಾಗೂ 13 ಇವರು, ಕೃಷ್ಣಪ್ಪನು ಕೆಂಚಪ್ಪನಿಗೆ ಅವನ ಬಲಭುಜಕ್ಕೆ ಬಾಕುವಿನಿಂದ ಇರಿದನೆಂದು ಹೇಳಿಕೆ ನೀಡಿದ್ದಾರೆ. ಪ್ರಾ.ಸಾ.1 ರಿಂದ 7 ಹಾಗೂ 13, ಇವರು 2ನೇ ಸಂಖ್ಯೆಯ ಆಪಾದಿತನು ಆ.ಸಾ.25ರ ಬಲತೋಳು/ಭುಜಕ್ಕೆ ಚಾಕುವಿನಿಂದ ಹೊಡೆದನೆಂದು ಹೇಳಿಕೆ ನೀಡಿದ್ದಾರೆ. ಪ್ರಾ.ಸಾ.1 ರಿಂದ ಪ್ರಾ.ಸಾ.8 ಹಾಗೂ ಪ್ರಾ.ಸಾ.13, ಇವರು, 2ನೇ ಸಂಖ್ಯೆಯ ಆಪಾದಿತನು ರಸ್ತೆಯಲ್ಲಿ ಬಾಂಬನ್ನು ಎಸೆದನೆಂದು, ಅದು ಸ್ಫೋಟಗೊಂಡಿರುವ ಕಾರಣದಿಂದ ಪ್ರಾ.ಸಾ.5ಕ್ಕೆ ಗಾಯಗಳಾದವೆಂದು ಹೇಳಿಕೆ ಸಾಕ್ಷೀಕರಿಸಿದ್ದಾರೆ. ಅವರು, 3ನೇ ಸಂಖ್ಯೆಯ ಆಪಾದಿತನು, ಕೆಂಚಪ್ಪನ ಹೊಟ್ಟೆಗೆ ಚಾಕುವಿನಿಂದ ಇರಿದನೆಂದು ಈ ರೀತಿಯಲ್ಲಿ ಅವನ ಬೆನ್ನಿನಿಂದ ಇದು ಮುಂದಕ್ಕೆ ಬಂದಿತೆಂದು ಸಾಕ್ಷೀಕರಿಸಿದ್ದಾರೆ. ಅಷ್ಟೇ ಅಲ್ಲದೆ, 3ನೇ ಸಂಖ್ಯೆಯ ಆಪಾದಿತನು, ಚಾಕುವಿನಿಂದ ಆ.ಸಾ.39ರ ಹೊಟ್ಟೆಗೆ ಚುಚ್ಚಿದನೆಂದು ಹಾಗೂ ಪ್ರಾ.ಸಾ.3, 6 ಹಾಗೂ 7ನ್ನು ಚಾಕುವಿನಿಂದ ಥಳಿಸಿದನೆಂದು ಹೇಳಿಕೆ ನೀಡಿದ್ದಾರೆ. ಪ್ರಾ.ಸಾ.1, 4, 5 ಹಾಗೂ 6 ಇವರು, 4ನೇ ಸಂಖ್ಯೆ ಆಪಾದಿತನು ಆ.ಸಾ.29ಕ್ಕೆ ದೊಣ್ಣೆಯಿಂದ ಬೆನ್ನಿಗೆ ಹೊಡೆದನೆಂದು ಹೇಳಿಕೆ ನೀಡಿದ್ದಾರೆ. ಪ್ರಾ.ಸಾ.7 ಆಪಾದಿತ ಸಂಖ್ಯೆ 4 ದೊಣ್ಣೆಯಿಂದ ಹೊಡೆದನೆಂದು

ಹೇಳಿಕೆ ನೀಡಿದ್ದಾರೆ. ಪ್ರಾ.ಸಾ.1, 2, 3, 5, 6 ಮತ್ತು 13 ಇವರು 6ನೇ ಸಂಖ್ಯೆಯ ಆಪಾದಿತನು ಸೈಕಲ್ ಚೈನಿನಿಂದ ಕೃಷ್ಣಪ್ಪನನ್ನು ಥಳಿಸಿದನೆಂದು ಹೇಳಿಕೆ ನೀಡಿದ್ದಾರೆ. ಪ್ರಾ.ಸಾ.1, 4, 5 ಇವರು, 7ನೇ ಸಂಖ್ಯೆಯ ಆಪಾದಿತನು ಪ್ರಾ.ಸಾ.7ನ್ನು ದೊಣ್ಣೆಯಿಂದ ಹೊಡೆದನೆಂದು ಹೇಳಿಕೆ ನೀಡಿದ್ದಾರೆ. ಪ್ರಾ.ಸಾ.1, 3, 4 ಹಾಗೂ 13 ಇವರು 8ನೇ ಸಂಖ್ಯೆಯ ಆಪಾದಿತನು, ಪ್ರಾ.ಸಾ.3ಕ್ಕೆ ಸೈಕಲ್ ಚೈನಿನಿಂದ ಬೆನ್ನಿಗೆ ಥಳಿಸಿದನೆಂದು ಹೇಳಿಕೆ ನೀಡಿದ್ದಾರೆ. ಪ್ರಾ.ಸಾ.3 ಹಾಗೂ 4, ಇವರು 11ನೇ ಸಂಖ್ಯೆಯ ಆಪಾದಿತನು, ದೊಣ್ಣೆಯಿಂದ ಹಿಡಿದಿದ್ದು ಪ್ರಾ.ಸಾ.1, 2, 5 ಹಾಗೂ 7ಇವರು, 11ನೇ ಸಂಖ್ಯೆಯ ಆಪಾದಿತನು, ಆ.ಸಾ.26ಕ್ಕೆ ದೊಣ್ಣೆಯಿಂದ ಹೊಡೆದನೆಂದು ಹೇಳಿಕೆ ನೀಡಿದ್ದಾರೆ. 10 ಹಾಗೂ 11ನೇ ಸಂಖ್ಯೆಯ ಆಪಾದಿತರ ವಿರುದ್ಧ ನೀಡಿದ ಹೇಳಿಕೆಯು ಸುಸಂಗತವಾಗಿರುವುದಿಲ್ಲ. ಪ್ರಾ.ಸಾ.1 ಇವನು, 10ನೇ ಸಂಖ್ಯೆಯ ಆಪಾದಿತನು ಆ.ಸಾ.29ನ್ನು ಹೊಡೆದನೆಂದು ಹೇಳಿಕೆ ನೀಡಿದ್ದಾನೆ. ಪ್ರಾ.ಸಾ.4, ಇವನು 10ನೇ ಸಂಖ್ಯೆಯ ಆಪಾದಿತನು ದೊಣ್ಣೆಯನ್ನು ಹಿಡಿದಿದ್ದನೆಂದು ಹಾಗೂ ಪ್ರಾ.ಸಾ.2 ಇವನು, 10ನೇ ಸಂಖ್ಯೆಯ ಆಪಾದಿತನು, ಆ.ಸಾ.4ನ್ನು ಹಾಗೂ ಆ.ಸಾ.26ನು ದೊಣ್ಣೆಯಿಂದ ಹೊಡೆದನೆಂದು ಹೇಳಿಕೆ ನೀಡಿದ್ದಾನೆ. ಪ್ರಾ.ಸಾ.1 ಇವನು, 10ನೇ ಸಂಖ್ಯೆಯ ಆಪಾದಿತನು ಆ.ಸಾ.29ನ್ನು ಕಾಲಿನಿಂದ ಒದೆದನೆಂದು ಹೇಳಿಕೆ ನೀಡಿದ್ದಾನೆ. ಪ್ರಾ.ಸಾ.1 ಇವನು, 12ನೇ ಸಂಖ್ಯೆಯ ಆಪಾದಿತನು ಆ.ಸಾ.29ನ್ನು ಹೊಡೆದನೆಂದು ಹಾಗೂ ಪ್ರಾ.ಸಾ.4 ಇವನು, 12ನೇ ಸಂಖ್ಯೆಯ ಆಪಾದಿತನು ಆ.ಸಾ.25ನ್ನು ದೊಣ್ಣೆಯಿಂದ ಹೊಡೆದನೆಂದು ಹೇಳಿಕೆ ನೀಡಿದ್ದಾರೆ.

17. ಘಟನೆಯ ದಿನಾಂಕದಿಂದು ಗಾಯಗೊಂಡ ಈ ಪ್ರತ್ಯಕ್ಷ – ಸಾಕ್ಷಿದಾರರನ್ನು ಪ್ರಾ.ಸಾ.20 ಡಾ॥ ಶ್ರೀನಿವಾಸನ್‌ರವರು ವಿಚಾರಣೆ ಮಾಡಿದ್ದಾರೆ. ಈ ಮುಂದಿನಂತಿರುವ ಗಾಯಗಳ ಸ್ವರೂಪವನ್ನು ಅವನ ಸಾಕ್ಷ್ಯ ಸೂಚಿಸುತ್ತವೆ:

***"ಪ್ರಾ.ಸಾ.3 : ದಾನೇಗೌಡ***

*1. ಎಡಭುಜ ಸ್ನಾಯುವಿನಲ್ಲಿ ಹೊರಮೈ ಗಾಯ, ಅನಿಯತ 1.ಸೆಂ.ಮೀ.ಕತ್ತರಿಸಿ ಹೋಗಿದೆ.*

*2. ಎಡಹೆಗಲ ಮೂಳೆಯ ವೈದ್ಯಕೀಯ ವಿಚಾರದಲ್ಲಿ 3" x 1/2" ರಷ್ಟು ಮೂಗೇಟು.*

*3. ಬಲಹೆಗಲ ಮೂಳೆಯ ಮೇಲಿನಿಂದ ಎಡ ಸೊಂಟದವರೆಗೂ ಮುಂದುವರೆದು 7" x 1/2 ಅನಿಯತ ಮೂಗೇಟು.*

*4. ನೆತ್ತಿಯ ಮೇಲೆ ಆಳವಾದ ತಲೆಬುರುಡೆ ಮೂಲಕ 1/2" ಇಂಚು ಉದ್ದ ಕತ್ತರಿಸಿದ ಗಾಯ.*

*5. ಎಡ ಎದೆಯಲ್ಲಿ 2 1/2 x 1/1 ಯಷ್ಟು ಮತ್ತೊಂದು ಮೂಗೇಟು.*

***"ಪ್ರಾ.ಸಾ.5: ಶ್ರೀರಾಮಪ್ಪ:***

*1. ತಲೆಬುರುಡೆಯಲ್ಲಿ ಆಳವಾದ 1 x 1/2" ನಷ್ಟು ನೆತ್ತಿಯನ್ನು ಕತ್ತರಿಸಿದ ಗಾಯ.*

*2. 1' ರಷ್ಟು ಎಡ ಭುಜದ ಹೊರಮೈ ಆಳದ ಅನಿಯತ ಗಾಯ.*

*3. ಹುಬ್ಬಿನ ಕಡೆಯಲ್ಲಿ ಎರಡರ ಮೇಲೆ 1.5 ಸೆಂ.ಮೀ ನಷ್ಟು ತರಚಿದ ಮೂಗೇಟು.*

*4. ಎದೆಯ ಮೇಲೆ 4–5 ಗುಂಡುಗಾಯ.*

*5. ಹೊರಮೈ ಆಳದಲ್ಲಿ 1" ರಷ್ಟು ಎಡ ತೊಡೆಯುದ್ದಕ್ಕೂ ಕತ್ತರಿಸಿದ ಗಾಯ.*

***ಪ್ರಾ.ಸಾ.6: ಗೋವಿಂದಪ್ಪ:***

*1. ಮಧ್ಯಭಾಗದಿಂದ ಎಡಕ್ಕೆ ನೇರ ಬೆನ್ನುಮೂಳೆ ಉದ್ದವಾಗಿ ಎಡಕ್ಕೆ 3–9 ರಲ್ಲಿ ಬೆನ್ನುಮೂಳೆ ಉದ್ದದಲ್ಲಿ 1" ಇಂಚು ಕತ್ತರಿಸಿದ ಗಾಯ".*

***ಪ್ರಾ.ಸಾ.7: ಭಾಗ್ಯಮ್ಮ:***

*1. ಬಲಗೈ ಮಣಿಕಟ್ಟಿನ ಬೆನ್ನಿನ 3/4" ಹೊರಮೈ ಗಾಯ.*

*2. 1 ಸೆಂ.ಮೀ ಹೊರಮೈ ಅದಕ್ಕೆ ಅಂಟಿಕೊಂಡ ಕತ್ತರಿಸಿದ ಗಾಯ.*

*3. ಎಡ ಪೃಷ್ಠದ ಮೇಲೆ ಮೃದುವಾಗಿರುವಿಕೆ.*

ಪ್ರಾ.ಸಾ.20. ಗಾಯಗೊಂಡ ವ್ಯಕ್ತಿಗಳ ದೇಹದ ಮೇಲಾದ ಗಾಯಗಳು, ಬಾಕು, ಚಾಕು ಸಲಕರಣೆಗಳಿಂದಾಗಿದ್ದು, ದೊಣ್ಣೆಯಿಂದ ಹೊರಮೈ ಗಾಯಗಳಾಗಿದ್ದು ಅನಿಯತ ಗಾಯಗಳು ಸೈಕಲ್ ಚೈನಿನಿಂದಾಗಿವೆಯೆಂದು ಅಭಿಪ್ರಾಯಪಟ್ಟಿದ್ದಾರೆ. ವೆಂಕಟಮ್ಮ (ಆ.ಸಾ.25) ಹಾಗೂ ಆ.ಸಾ.29 ಇವರುಗಳು, ಪ್ರಾ.ಸಾ.20 ಗಾಯಗಳನ್ನು ಪರೀಕ್ಷಿಸಿದವರ ಕುಟುಂಬದ ಇತರ ಸದಸ್ಯರಲ್ಲಿ ಸೇರಿಸಲಾಗಿತ್ತು.

18. ಪ್ರಾ.ಸಾ.20, ಕೃಷ್ಣಪ್ಪ ಮೃತದೇಹದ ಮರಣೋತ್ತರ ಶವಪರೀಕ್ಷೆಯನ್ನು ನಡೆಸಿದ್ದು, ಇದು ಹೊರ ಹಾಗೂ ಒಳ ಗಾಯಗಳನ್ನು ವಿವರಿಸಿದೆ. ಅವರು ಹೀಗೆ ಹೇಳಿಕೆ ನೀಡಿದ್ದಾರೆ:

> *"ಪರೀಕ್ಷೆಯನ್ನು ಮಾಡಿದ ನಂತರ, ನಾನು ಈ ಮುಂದಿನ ಹೊರಮೈ ಗಾಯಗಳನ್ನು ಗುರುತಿಸಿರುತ್ತೇನೆ.*
>
> *1. ದೀರ್ಘ ಅವಿಚ್ಛಿನ್ನ 10" x 1/2" ಹೊರಮೈಗಾಯವು ಎಡದಿಂದ ಬಲದ ಪಾರ್ಶ್ವದ ಕೊನೆ ಹೆಗಲಮೂಳೆಯ ಕೆಳಗಿನ ಅಂಚಿನವರೆಗೂ ಇದೆ.*
>
> *2. ಕೆಳಗಿನ ತುದಿಯಿಂದ ಲಂಬವಾಗಿ ತುದಿಗಳು ಮಗುಚಿದಂತೆ ಮಧ್ಯ ಬಲಗಡೆಯ ಮೇಲಿನ ಎದೆಯ ಮೂಳೆಯಲ್ಲಿ 1/2" x 1/2" ಅಗಲದ ಕತ್ತರಿಸಿದ ಗಾಯ ತೀಕ್ಷ್ಣವಾಗಿವೆ.*
>
> *1 1/2" x 1/2" ಗಾಯ ಕತ್ತರಿಸಿದ್ದು ಲಂಬವಾಗಿ ಎದೆಯು ತುಂಡಾದ ಮೇಲೆ ಬಲಗಡೆ ಶ್ವಾಸದ ಮೂಳೆಯಲ್ಲಿ 200 ಮಿಲಿ ಲೀಟರ್ ರಕ್ತದೊಂದಿಗೆ ಎಡತುದಿ ದಪ್ಪವಾಗಿ ಮೇಲಿನ ಬಲ ಹೆಗಲ ಮೂಳೆ ಮಧ್ಯದಲ್ಲಿ ಕತ್ತರಿಸಿ ಹೋಗಿದೆ. ಬಲ ಶ್ವಾಸ ಕುಗ್ಗಿಹೋಗಿದೆ.*
>
> ***ಶ್ವಾಸಕೋಶ:*** *ಬಲಶ್ವಾಸದ ಬಲದ ಭಾಗದಲ್ಲಿ ಲಂಬವಾಗಿ ಕತ್ತರಿಸಿಹೋಗಿದ್ದು, ಕಿವಿರುಗಳು, ತೆರೆಗಳು ಹಾಗೂ ಕೆನ್ನೆತ್ತರಿನಿಂದ ಕೂಡಿದ ಮಧ್ಯದ ಹಾಲೆಯ ಮಧ್ಯಭಾಗದವರೆಗೆ ಅದು ವಿಸ್ತರಿಸಿದೆ.*
>
> *ದೇಹದ ಇತರ ಭಾಗಗಳಿಗೆ ಹಾನಿಯಾಗದೆ ವಿವರ್ಣವಾಗಿವೆ.*

ರಕ್ತಸ್ರಾವವಾಗಿರುವ ಕಾರಣದಿಂದ ಶ್ವಾಸಕೋಶಕ್ಕೆ ಹಾನಿಯಾದ ಕಾರಣದಿಂದ ಹೊರಮೈನ ಪರಿಚಲನೆಯ ಕಾರಣದಿಂದ, ನಾವು ಸಂಭವಿಸಿದೆಯೆಂದು ನಾನು ಅಭಿಪ್ರಾಯಪಡುತ್ತೇನೆ. ನಾನು ಮರಣೋತ್ತರ ಶವ ಪರೀಕ್ಷೆ ವರದಿಯನ್ನು ನಿಶಾನೆ ಪಿ.16 ನಿಶಾನೆ ಪಿ.16(ಎ) ಪ್ರಕಾರ ನೀಡಿದ್ದು ನನ್ನ ಸಹಿ ಹಾಕಿರುತ್ತೇನೆ.

ಮೃತ ಕೆಂಚಪ್ಪನ ದೇಹದಲ್ಲಿ ಕಂಡುಬಂದ ಗಾಯಗಳು ಮುದ್ದೆಮಾಲು 5 ರಂಥ ಆಯುಧಗಳ ಕಾರಣಗಳಿಂದಾಗಿರಬಹುದು".

ಸದೃಶವಾಗಿ, ಕೆಂಚಪ್ಪನ ದೇಹದ ಮರಣೋತ್ತರ ಶವ ಪರೀಕ್ಷೆಯನ್ನು ಪ್ರಾ.ಸಾ.20 ಈ ಮುಂದಿನ ಗಾಯಗಳ ಮೂಲಕ ವಿವರಿಸಿದ್ದಾರೆ:

> *"1. ಲಂಬವಾಗಿ 2" ಮಗುಚಿಕೊಂಡ ತುದಿಗಳು, ರಂಧ್ರದ ಗಾಯದಿಂದ ಲಂಬವಾಗಿ ಕತ್ತರಿಸಿಹೋಗಿದ್ದು, ಹೊಕ್ಕಳಿನ ಮೇಲೆ 1 1/2 x 1/2" ಬಿರುಕು ಆಗಿದ್ದು, ಗಾಯದ ಕೆಳಗಿನ ಲಂಬ ಕೋನದಲ್ಲಿ 1" ಹೊರಮೈ ಗಾಯವಾಗಿದ್ದು 10" ಮೂಲಕ ಸಣ್ಣ ಕರುಳು ಈಚೆಗೆ ಬಂದಿದೆ. ಗಾಯವು ಒಳಪೊರೆಯನ್ನು ರಂಧ್ರಮಾಡಿದೆ. ದೊಡ್ಡ ಕರುಳಿನ ಕಡೆಗೆ ಹೋಗುವ ಹಾಗೂ ಸಣ್ಣ ಕರುಳಿನ ಆರಂಭದ ಕೆಳಗಡೆಗೆ ಉದ್ದದಲ್ಲಿ 1/4" ಇಳಿದಿದೆ. ಹೊರಗಡೆಯ ಗಾಯ ಮಧ್ಯಭಾಗದಲ್ಲಿ ಲಂಬವಾಗಿ 1 3/4" ಹಿಂದಕ್ಕೆ ಇದೆ ಹಾಗೂ ಎಲ್1 ರ ಬೆನ್ನುಮೂಳೆ ಕ್ರಮ ಅಡ್ಡಡ್ಡವಾಗಿದೆ ಹಾಗೂ 1/2" ಸೀಳಿಕೊಂಡು ಉದ್ದದಲ್ಲಿ 1" ಇಂಚು ಸೀಳಿಕೊಂಡಿದ್ದು, ತುದಿಗಳು ತಲೆಕೆಳಗಾಗಿವೆ.*
>
> *ಎಲ್ಲಾ ಗಾಯಗಳು ಸ್ವರೂಪದಲ್ಲಿ ಕೂಡಿಕೊಂಡಿವೆ.*
>
> *ಮೇಲೆ ವಿವರಿಸಲಾದಂಥ ಗಾಯ ಹೊಟ್ಟೆ ರಂಧ್ರ ಆಗಿರುವುದು ಒಳ ಪರೀಕ್ಷೆಯಿಂದ ಕಂಡು ಬರುತ್ತದೆ. ಜಠರದ ಒಳಪೊರೆ ಹಾಗೂ ಮೆದುಳಿನ ಒಳಪೊರೆ ರಂಧ್ರವಾಗಿವೆ.*

*ಸಣ್ಣಕರುಳಿನ ಆರಂಭದ ಕೆಳಭಾಗ ಆಚೆಗೆ ಬಂದಿದ್ದು, ಬಲ ಕಿಡ್ನಿಯ 1/4 ಭಾಗ ಮುಂದೆ ಬಂದಿದೆ ಹಾಗೂ ಕಾಲು ಭಾಗದ ಇಂಚಿನಷ್ಟು ಬಲ ಕಿಡ್ನಿ ಮುಂಬಾಗಕ್ಕಿದೆ.*

*ದೇಹದ ಇತರ ಭಾಗಗಳು ಹಾನಿಗೊಂಡಿದ್ದು, ಸಾಮಾನ್ಯವಾಗಿದೆ ಹಾಗೂ ವಿವರ್ಣಗೊಂಡಿವೆ. ನಾನು ನಿಶಾನೆ ಪಿ.17, ನಿಶಾನೆ ಪಿ.17(ಎ) ಪ್ರಕಾರ ಮರಣೋತ್ತರ ಶವಪರೀಕ್ಷೆ ವರದಿಯನ್ನು ನೀಡಿದ್ದು, ನನ್ನ ಸಹಿಯಿರುತ್ತದೆ.*

*ಮರಣವು, ಆಘಾತದಿಂದ ಆಗಿದ್ದು, ಪ್ರಮುಖ ಅಂಗ ಕಿಡ್ನಿಗೆ ಹಾನಿಯಾದ ಕಾರಣದಿಂದ ದೊಡ್ಡ ಮಟ್ಟದಲ್ಲಿ ರಕ್ತಸ್ರಾವವಾಗಿರುವುದರಿಂದ ಮರಣ ಸಂಭವಿಸಿದೆಯೆಂದು ಅಭಿಪ್ರಾಯಪಡುತ್ತೇನೆ."*

ಕೃಷ್ಣಪ್ಪನ ಶ್ವಾಸಕೋಶಗಳಿಗೆ ಗಂಭೀರವಾಗಿ ಹಾನಿಯಾಗಿದ್ದು, ವೈದ್ಯಕೀಯ ಸಾಕ್ಷ್ಯಗಳಿವೆ ಪರಿಚಲನೆ ವಿಫಲವಾದ ಕಾರಣದಿಂದ ಅವನು ಮರಣಹೊಂದಿರುವುದನ್ನು ಸೂಚಿಸುತ್ತವೆ. ಕೆಂಚಪ್ಪನ ಕಿಡ್ನಿಗೆ ಹಾನಿಯಾಗಿದ್ದು, ಆಘಾತಗೊಂಡು ರಕ್ತಸ್ರಾವವಾದ ಕಾರಣದಿಂದ ಮರಣಹೊಂದಿದ್ದಾನೆ.

19. ಅಧಿವಿಚಾರಣಾ ನ್ಯಾಯಾಲಯವು, ನಾವು ಈ ಮೊದಲು ಗಮನಿಸಿದಂತೆ, ಆಪಾದಿತನಿಗೆ ಆಗಿರುವ ಗಾಯಗಳನ್ನು (2ನೇ ಸಂಖ್ಯೆಯ ಆಪಾದಿತನನ್ನು ಹೊರತುಪಡಿಸಿ) ತೃಪ್ತಿಕರವಾಗಿ ವಿವರಿಸಲಾಗಿಲ್ಲವೆನ್ನುವ ಆಧಾರದ ಮೇಲೆ ಪ್ರಾಥಮಿಕವಾಗಿ ಆಪಾದಿತನನ್ನು ಖುಲಾಸೆಗೊಳಿಸಲು ಸಾಕ್ಷಿಯ ದಾಖಲೆಯಲ್ಲಿ ಈ ಸ್ಥಿತಿಯನ್ನು ಮನಗಾಣಿಸಿರುತ್ತದೆ. ಲಕ್ಷ್ಮಿಸಿಂಗ್ ಪ್ರಕರಣದಲ್ಲಿ (ಮೇಲಿನ) ಈ ನ್ಯಾಯಾಲಯದ ದ್ವಿಸದಸ್ಯಪೀಠ ಹೀಗೆ ಅಭಿಪ್ರಾಯಪಟ್ಟಿತ್ತು:

*"12. ನಿಜವಾಗಿ, ಇಬ್ಬರು ಮೃತರನ್ನು ಹಾಗೂ ದಾಸಯಿನ್ ಸಿಂಗ್‌ನನ್ನು ಥಳಿಸುವುದಕ್ಕೆ ಸಂಬಂಧಪಟ್ಟಂತೆ ಅಂಥ ಗ್ರಾಫಿಕ್ ವರದಿಯನ್ನು ಪ್ರತ್ಯಕ್ಷ ಸಾಕ್ಷಿದಾರರು ನೀಡಿರಬಹುದಾದರೂ, ಆಪಾದಿತ ವ್ಯಕ್ತಿಗೆ ಆದ ಗಾಯಗಳನ್ನು ಅವರು ಇನ್ನೂ ಉದ್ದೇಶಪೂರ್ವಕವಾಗಿ ಮುಚ್ಚಿಟ್ಟಿರುವುದು ಪ್ರಾಸಿಕ್ಯೂಷನ್‌ನ ಸಂಪೂರ್ಣ ವಾದವನ್ನು ನಂಬದಿರುವುದಕ್ಕೆ ಬಹಳ ಪ್ರಮುಖವಾದ ಸನ್ನಿವೇಶವಾಗಿದೆ. ಅಪರಾಧವನ್ನು ಹೆಚ್ಚಿನ ರುಜುವಾತಿನಿಂದ*

*ವಿರೂಪಗೊಳಿಸಿರುವುದರಿಂದ ಅದೇ ಘಟನೆಯಲ್ಲಿ ಆಪಾದಿತನೊಬ್ಬನಿಗೆ ಗಾಯಗಳಾಗಿರುವುದು ರುಜುವಾತಾಗಿದ್ದು, ಪ್ರಾಸಿಕ್ಯೂಷನ್ನು ಅಂಥ ಗಾಯಗಳನ್ನು ವಿವರಿಸದಿರುವುದು ಪ್ರಾಸಿಕ್ಯೂಷನ್ ವಾದದ ಕೊರತೆಯನ್ನು ವ್ಯಕ್ತಪಡಿಸುತ್ತವೆ. ಘಟನೆಯ ಉಗಮ ಹಾಗೂ ಮೂಲವನ್ನು ಉದ್ದೇಶಪೂರ್ವಕವಾಗಿ ಮುಚ್ಚಿಟ್ಟಿದ್ದು, ಇದು ಪ್ರಾಸಿಕ್ಯೂಷನ್ನು ನಡೆದ ಘಟನೆಯ ಸತ್ಯದ ಆವೃತ್ತಿಯನ್ನು ಹೊರಗೆಡಹಿಲ್ಲವೆನ್ನುವ ಅಪ್ರತಿರೋಧ ನಿರ್ಣಯಕ್ಕೆ ಬರುವಂತೆ ಮಾಡುತ್ತದೆ."*

ಲಕ್ಷ್ಮಿಸಿಂಗ್ ಪ್ರಕರಣದ ನಿರ್ಣಯವನ್ನು ಅಮರ್ ಮಲ್ಲ ವಿರುದ್ಧ ತ್ರಿಪುರಾ [4] ರಾಜ್ಯ ಪ್ರಕರಣದಲ್ಲಿನ ಈ ನ್ಯಾಯಾಲಯದ ನಂತರ ತೀರ್ಪುಗಳಲ್ಲಿ ಪರಿಗಣಿಸಲಾಗಿದೆ. ಈ ನ್ಯಾಯಾಲಯದ ಇಬ್ಬರು ನ್ಯಾಯಾಧಿಶರ ಪೀಠವು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

*"9. – – – – ಈ ಆಪಾದಿತ ವ್ಯಕ್ತಿಗಳಿಗೆ ಆಗಿದೆಯೆಂದು ಹೇಳಲಾದ ಗಾಯಗಳ ಸ್ವರೂಪದಿಂದ ಅದು ಸರಳ ಹಾಗೂ ಸಣ್ಣದ್ದಾಗಿದೆಯೆಂಬುದು ಗೋಚರಿಸುತ್ತದೆ. ಪ್ರಾಸಿಕ್ಯೂಷನ್ನು ಆಪಾದಿತ ವ್ಯಕ್ತಿಗಳಿಗೆ ಆದ ಗಾಯಗಳನ್ನು ವಿವರಿಸಲು ವಿಫಲವಾಗಿದೆ ಎಂಬ ಕಾರಣಮಾತ್ರದಿಂದಲೇ ಗಾಯಗೊಂಡವರನ್ನು ಒಳಗೊಂಡಂತೆ ಅದೇ ಕಾರಣಕ್ಕಾಗಿ, ಪ್ರಾಸಿಕ್ಯೂಷನ್ ವಾದವನ್ನು ವಿಸರ್ಜಿತಗೊಳಿಸುವ ಆಧಾರವಾಗಿ ಅದನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ. ಹಾಗೂ ವೈದ್ಯಕೀಯ ಸಾಕ್ಷ್ಯ ಹಾಗೂ ತನಿಖಾಧಿಕಾರಿಯ ವಸ್ತುನಿಷ್ಠ ನಿರ್ಣಯವನ್ನು ಅವರ ಸಾಕ್ಷ್ಯವು ಸಮರ್ಥಿಸುತ್ತದೆ.*

*ಅದರ ತತ್ವವನ್ನು, ಮಧ್ಯಪ್ರದೇಶ ರಾಜ್ಯ ವಿರುದ್ಧ ರಮೇಶ್ [5] ಪ್ರಕರಣದಲ್ಲಿ ದ್ವಿಸದಸ್ಯ ಪೀಠ ನ್ಯಾಯಾಧೀಶರು ಅನುಸರಿಸಿದ್ದಾರೆ, ಇದರಲ್ಲಿ ಹೀಗೆ ಅಭಿಪ್ರಾಯಪಡಲಾಗಿದೆ."*

---

*4. (2002) 7 ಎಸ್‌ಸಿಸಿ 91.*

*5. (2005) 9 ಎಸ್‌ಸಿಸಿ 705.*

*"11. ಘಟನೆ ನಡೆದ ಸಂದರ್ಭದಲ್ಲಿ ಅಥವಾ ಮಾತಿನ ಚಕಮಕಿ ನಡೆದ ಸಂದರ್ಭದಲ್ಲಿ ಆಪಾದಿತರಿಗೆ ಆದ ಗಾಯಗಳನ್ನು ವಿವರಿಸದಿರುವುದು ಬಹಳ ಪ್ರಮುಖ ಸನ್ನಿವೇಶವಾಗಿದೆ. ಆದರೆ, ಪ್ರಾಸಿಕ್ಯೂಷನ್ನು ಗಾಯಗಳನ್ನು ವಿವರಿಸಿದ ಮಾತ್ರದಿಂದಲೇ ಎಲ್ಲಾ ಪ್ರಕರಣಗಳಲ್ಲಿನ ಪ್ರಾಸಿಕ್ಯೂಷನ್ ವಾದವು ಪರಿಣಾಮಕಾರಿಯಾಗಬಹುದಾಗಿರುವುದಿಲ್ಲ. ಈ ತತ್ವವನ್ನು ಆಪಾದಿತರಿಗೆ ಆದ ಗಾಯಗಳು ಸಣ್ಣಪುಟ್ಟವಾಗಿದ್ದಲ್ಲಿ ಹಾಗೂ ಮೇಲು ಮೇಲಿನ ಗಾಯಗಳಾಗಿದ್ದಲ್ಲಿ ಅಥವಾ ಸಾಕ್ಷ್ಯವು ತುಂಬಾ ಸ್ಪಷ್ಟ ಹಾಗೂ ಸಮರ್ಪಕವಾಗದಿದ್ದಲ್ಲಿ, ಪ್ರತ್ಯೇಕವಾಗಿದ್ದಲ್ಲಿ ಹಾಗೂ ಹಿತಾಸಕ್ತಿ ಹೊಂದಿರದಿದ್ದಲ್ಲಿ, ಸುಸಂಗತವಾಗದ ಹಾಗೂ ನಂಬಿಕೆಯುಳ್ಳವುಗಳಾಗದಿದ್ದಲ್ಲಿ, ಗಾಯಗಳನ್ನು ವಿವರಿಸಲು ಪ್ರಾಸಿಕ್ಯೂಷನ್ ಕಡೆಯಿಂದ ಬಿಡುವುದು ಪ್ರಮುಖವಾಗಿದ್ದಲ್ಲಿ ಅಂಥ ತತ್ವಗಳನ್ನು ಪ್ರಕರಣಗಳಿಗೆ ಅನ್ವಯಿಸಲಾಗಿದೆ. (ಲಕ್ಷ್ಮಿಸಿಂಗ್ ವಿರುದ್ಧ ಬಿಹಾರ [(1976) 4 ಎಸ್‌ಸಿಸಿ 394: 1976 ಎಸ್‌ಸಿಸಿ (ಕ್ರಿ) 671:ಎಐಆರ್ 1976 ಎಸ್‌ಸಿ 22ಕ63])".*

ರಘುಬೀರ್ ಸಿಂಗ್ ವಿರುದ್ಧ ರಾಜಸ್ಥಾನ [6] ರಾಜ್ಯ ಪ್ರಕರಣದಲ್ಲಿ ಈ ನ್ಯಾಯಾಲಯದ ದ್ವಿಸದಸ್ಯ ಪೀಠವು ಹೀಗೆ ಅಭಿಪ್ರಾಯಪಟ್ಟಿದೆ:

*"14. – – – – ಆಪಾದಿತನಿಗೆ ಆದ ಪ್ರತೀ ಹಾಗೂ ಪ್ರತಿಯೊಂದು ಗಾಯವನ್ನು ವಿವರಿಸಬೇಕಾಗುತ್ತದೆ ಹಾಗೂ ನಿರ್ದಿಷ್ಟವಾಗಿ, ಆಪಾದಿತನಿಗೆ ಆದ ಎಲ್ಲಾ ಗಾಯಗಳು ಸ್ವರೂಪದಲ್ಲು ಸರಳವಾಗಿವೆ (ಪ್ರಸ್ತುತ ಪ್ರಕರಣದಲ್ಲಿರುವಂತೆ) ಹಾಗೂ ಪ್ರಕರಣದ ಸಂಗತಿಗಳನ್ನು ಸಾಧ್ಯತೆಯಿರುವ ಸ್ವರೂಪದ ಮೇಲೆ ನಿರ್ಧರಿಸಬೇಕಾಗುತ್ತದೆ . . ."*

---

[6] (2011) 12 ಸ.ವೋ.ನ್ಯಾ.235.

ಪ್ರಾ.ಸಾ.20 ಸಾಕ್ಷ್ಯವು, 2ನೇ ಆಪಾದಿತನಿಗೆ ಆಗಿರುವ ಗಾಯಗಳನ್ನು ಟಿಪ್ಪಣಿ ಮಾಡಿದ್ದು, ಅವು ಹೀಗಿವೆ:

> *"1. ಚರ್ಮವು ಕತ್ತರಿಸಿದ ಬಿಳಿ ಬಣ್ಣದ ಸಿಡಿದಿರುವ ಗಾಯವಾಗಿದೆ ಹಾಗೂ ಎಡ ತೊಡೆ ಎಲುಬಿನ ಸಂಶಯಾಸ್ಪದ ಮೂಳೆಮುರಿತದಿಂದ ಅಪಾರ ರಕ್ತಸ್ರಾವದಿಂದ ಎಡ ತೊಡೆ ಸಂಪೂರ್ಣ ಅರ್ಧ ಒಳಗೊಂಡ ಭಾಗಶಃ ತೊಡೆಯ ಮುಂಭಾಗದ ಸ್ನಾಯು.*
>
> *2. ಬಹು ಸಣ್ಣ ಗುಂಡುಗಳ ಗಾಯಗಳು ಕೆಳ ಎಡ ರೊಂಡಿಯ ಎಲುಬಿನಲ್ಲಿ ಎಡ ತೊಡೆಯ ಸಂದಿಯಲ್ಲಿ ಗಾಯಗಳಿವೆ."*

2ನೇ ಸಂಖ್ಯೆಯ ಆಪಾದಿತನು, ಘಟನೆಯ ಸಂದರ್ಭದಲ್ಲಿ ಬಾಂಬನ್ನು ತೆಗೆದುಕೊಂಡು ಹೋಗುತ್ತಿದ್ದಾಗ ಸಿಡಿದು ಗಾಯಗೊಂಡಿರುವರೆಂದು ಹೇಳಲಾದ ಪ್ರಾಸಿಕ್ಯೂಷನ್ ಸಾಕ್ಷಿದಾರರ ಸಾಕ್ಷ್ಯದಲ್ಲಿ ಈ ಗಾಯಗಳನ್ನು ಯುಕ್ತವಾಗಿ ವಿವರಿಸಲಾಗಿದೆ. ಇತರ ಆಪಾದಿತರಿಗೆ ಆದ ಗಾಯಗಳು ಸ್ಪಷ್ಟವಾಗಿ ಸರಳ ಗಾಯಗಳಾಗಿವೆ. 3ನೇ ಸಂಖ್ಯೆಯ ಆಪಾದಿತರಿಗೆ ಆಗಿರುವ ಸಣ್ಣಪುಟ್ಟ ಗಾಯಗಳು 2ನೇ ಸಂಖ್ಯೆಯ ಆಪಾದಿತನು ಬಾಂಬನ್ನು ಸಿಡಿಸಿದ ಕಾರಣದಿಂದಾಗಿವೆಯೆಂದು ಪತ್ತೆ ಹಚ್ಚಲಾಗಿದೆ. 4 ಹಾಗೂ 5ನೇ ಸಂಖ್ಯೆಯ ಆಪಾದಿತರಿಗೆ ಆದ ಗಾಯಗಳು ಸ್ವರೂಪದಲ್ಲಿ ಸರಳವಾಗಿವೆ.

20. ಮೇಲಿನ ದಾಖಲೆಯ ಈ ಸ್ಥಿತಿಯಿಂದ, ಅಧಿವಿಚಾರಣಾ ನ್ಯಾಯಾಲಯದ ತೀರ್ಪು, ಸ್ಪಷ್ಟವಾಗಿ ವಿಕೃತತೆಯಿಂದ ಕೂಡಿದೆಯೆಂಬುದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಒಂದು ಹಂತದಲ್ಲಿ, ಅಧಿವಿಚಾರಣಾ ನ್ಯಾಯಾಲಯವು, ನಾಲ್ಕು ಜನ ಆಪಾದಿತರಿಗೆ 'ಮಾರಣಾಂತಿಕ ಗಾಯಗಳಾದ' ಹಾನಿಗಳಾಗಿವೆಯೆಂದು ಪ್ರಸ್ತಾವಿಸಿದೆ, ಆಪಾದಿತನ ಕಡೆಯಿಂದ ಘಟನೆ ನಡೆದ ಕ್ರಮದಲ್ಲಿ ಯಾವುದೇ ಸಾವು ಉಂಟಾಗುತ್ತಿರಲಿಲ್ಲವೆಂಬುದನ್ನು ನಿರ್ಲಕ್ಷಿಸಿದೆ. ತೀರ್ಪಿನ ಕ್ರಮದಲ್ಲಿನ ಇತರ ಸ್ಥಳಗಳಲ್ಲಿ, ಅಧಿವಿಚಾರಣಾ ನ್ಯಾಯಾಲಯವು, ಗಂಭೀರ ಗಾಯಗಳಾಗಿವೆಯೆಂದು ಅಭಿಪ್ರಾಯಪಟ್ಟಿದೆ. ಇಲ್ಲಿ ಮತ್ತೆ 2ನೇ ಸಂಖ್ಯೆಯ ಆಪಾದಿತನು ಬಾಂಬನ್ನು ಹಿಡಿದುಕೊಂಡು ಸಿಡಿಸಿದ ಕಾರಣದಿಂದ 3ನೇ ಸಂಖ್ಯೆಯ

ಆಪಾದಿತನು ಗಾಯಗೊಂಡು, ಸಣ್ಣ ಗುಂಡಿನ ಗಾಯಗಳನ್ನು ಗಮನಿಸಲು ವಿಫಲವಾಗಿರುವುದರಲ್ಲಿ ಸಾಕ್ಷ್ಯ ಹಾಗೂ ಸ್ಪಷ್ಟ ದೋಷವೆಸಗಿತ್ತು. ಆಪಾದಿತರಿಗೆ ಆಗಿದ್ದ ಇತರ ಗಾಯಗಳು ಸಣ್ಣ ಸ್ವರೂಪದವುಗಳಾಗಿದ್ದವು. ಅಷ್ಟೇ ಅಲ್ಲದೆ, ಆಪಾದಿತನ ಕಡೆಯಿಂದ ಸಲ್ಲಿಸಿದ್ದ ಎದುರು ಫಿರ್ಯಾದಿನಲ್ಲಿ, ಪೊಲೀಸರು, ತನಿಖೆಯನ್ನು ನಡೆಸಿದ ನಂತರ ದಂಡಾಧಿಕಾರಿಗಳು ಅಂಗೀಕರಿಸಿದ್ದ ಬಿ ಸಾರಾಂಶ ವರದಿಯನ್ನು ಸಲ್ಲಿಸಿದ್ದಾರೆ.

21. ಆಪಾದಿತರನ್ನು ಖುಲಾಸೆಗೊಳಿಸಿದ ಅಧಿವಿಚಾರಣಾ ನ್ಯಾಯಾಲಯದ ಮೂಲ ಆಧಾರವು, ದಾಖಲೆಯಲ್ಲಿನ ಸಾಕ್ಷ್ಯಕ್ಕೆ ವಿರುದ್ಧವಾಗಿದೆ ಹಾಗೂ ಸ್ಪಷ್ಟವಾಗಿ ವಿಕೃತತೆಯಿಂದ ಕೂಡಿದೆ. ದಾಖಲೆಯಲ್ಲಿರುವ ಸಾಕ್ಷ್ಯವು ಈ ಮುಂದಿನ ಸನ್ನಿವೇಶಗಳ ಸೂಚಕವಾಗಿದೆ:

> *(i) ಘಟನೆಯ ಪರಿಣಾಮವಾಗಿ, ಇಬ್ಬರು ವ್ಯಕ್ತಿಗಳಾದ – ಕೆಂಚಪ್ಪ ಹಾಗೂ ಕೃಷ್ಣಪ್ಪ ಇವರು ದೂರುದಾರನ ಕುಟುಂಬದಲ್ಲಿ ನರಮೇಧವಾಗಿದ್ದು ಹಾಗೂ ಸಂದರ್ಭಾನುಸಾರ ಆರು ಜನರಿಗೆ ಗಾಯಗಳಾಗಿದ್ದವು;*
>
> *(ii) ದೂರುದಾರರ ಕುಟುಂಬದಲ್ಲಿ ಯಾವ ವ್ಯಕ್ತಿಗಳ ಬಳಿಯು ಆಯುಧವಿರಲಿಲ್ಲ;*
>
> *(iii) ವಿರುದ್ಧವಾಗಿ, ಆಪಾದಿತನ ಕಡೆಯಿಂದ, ಬಾಕು, ಚಾಕು, ಸೈಕಲ್ ಚೈನುಗಳು ಹಾಗೂ ಸ್ಫೋಟಕಗಳಂಥ ಮಾರಕಾಯುಧಗಳೊಂದಿಗೆ ದೂರುದಾರನ ಮನೆಗೆ ಬಂದಿದ್ದಾರೆ;*
>
> *(iv) ಮೃತ ಇಬ್ಬರು ವ್ಯಕ್ತಿಗಳಿಗೆ ಆದ ಗಾಯವು ದೇಹದ ಪ್ರಮುಖ ಭಾಗಗಳಾದ ಶ್ವಾಸಕೋಶ ಮತ್ತು ಕಿಡ್ನಿಯಂಥ ಭಾಗಗಳಿಗೆ ಗಾಯಗಳಾಗಿವೆ; ಹಾಗೂ*
>
> *(v) ಬೆಳಿಗ್ಗೆ 10.30 ರಲ್ಲಾದ ಪ್ರಾರಂಭಿಕ ಮಾತಿನ ಘರ್ಷಣೆಯ ನಂತರ, ಮೋಜಣಿ ಅಧಿಕಾರಿಗಳು ಸ್ಥಳದಿಂದ ಹೊರಟು ಹೋಗಿದ್ದು, ಆಪಾದಿತರು ಮಾರಕಾಯುಧಗಳೊಂದಿಗೆ ಹಿಂತಿರುಗಿ ಬಂದಿದ್ದು, ಕೃಷ್ಣಪ್ಪ ಹಾಗೂ*

> *ಕೆಂಚಪ್ಪನವರಿಗೆ ಘಟನೆಯಲ್ಲಿ ಗಂಭೀರ ಗಾಯಗಳಾಗಿದ್ದು, ಇದು ಅವರ ಮರಣಕ್ಕೆ ಕಾರಣವಾಗಿದೆ.*

ಅಲ್ಲದೆ, ಈ ಮೊದಲು ಗಮನಿಸಿದ ಅಧಿವಿಚಾರಣಾ ನ್ಯಾಯಾಲಯದ ತೀರ್ಪಿನಲ್ಲಿ ವಿಕೃತತೆಯಿದ್ದು, ಶಂಕೆಗಳ ಆಧಾರದ ಮೇಲೆ ತೀರ್ಪನ್ನು ನೀಡಿರುವುದು ಸ್ಪಷ್ಟವಾಗುತ್ತದೆ. ಅಧಿವಿಚಾರಣಾ ನ್ಯಾಯಾಲಯವು ಮೃತನು 6 ಅಡಿ ಎತ್ತರವಿದ್ದುದರಿಂದ, 1ನೇ ಸಂಖ್ಯೆಯ ಆಪಾದಿತನು 5 ಅಡಿ ಎತ್ತರವಿದ್ದು, ಚಾಕುವಿನಿಂದ ಗಾಯಗಳನ್ನು ಮಾಡಿದರೆ ಅದು ಸ್ವರೂಪದಲ್ಲಿ ಓರೆಯಾಗಿರುತ್ತದೆ ಲಂಬವಾಗಿರುವುದಿಲ್ಲವೆಂದು ಊಹಿಸಿಕೊಂಡಿದೆ. ದಾಖಲೆಯಲ್ಲಿರುವ ವೈದ್ಯಕೀಯ ಸಾಕ್ಷ್ಯದ ಪ್ರಮುಖ ಸಂಗತಿಗಳನ್ನು ಸಂಪೂರ್ಣವಾಗಿ ಅಲ್ಲಗಳೆಯಲಾಗಿದೆ. ಪ್ರಾಸಾ.3 ಹಾಗೂ 4ರ ಸಾಕ್ಷ್ಯದಲ್ಲಿ ಅಧಿವಿಚಾರಣಾ ನ್ಯಾಯಾಲಯ ಪ್ರಸ್ತಾಪಿಸಿರುವ ವಿರೋಧಾಭಾಸಗಳು ಆ ಕಾರಣಕ್ಕಾಗಿ ಪ್ರಾಸಿಕ್ಯೂಷನ್‌ನ ಸಂಪೂರ್ಣ ವಾದವನ್ನು ನಂಬದಿರುವ ಆ ಸ್ವರೂಪದಲ್ಲಿಲ್ಲ.

22. ಈ ಕಾರಣಗಳಿಗಾಗಿ, ಉಚ್ಚ ನ್ಯಾಯಾಲಯವು, ಖುಲಾಸೆಯ ವಿರುದ್ಧದ ಅಪೀಲಿನಲ್ಲಿ ಅದರ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವುದನ್ನು ರೂಪಿಸುವ ಮಾನದಂಡಗಳನ್ನು ಸರಿಯಾಗಿ ಗಮನದಲ್ಲಿಟ್ಟುಕೊಂಡು ಖುಲಾಸೆಯ ತೀರ್ಪನ್ನು ವಿಪರ್ಯಯಗೊಳಿಸುವುದನ್ನು ಸಂಪೂರ್ಣವಾಗಿ ಸಮರ್ಥಿಸಿಕೊಂಡಿತ್ತು. ಈ ಪ್ರಕರಣದ ಸಂಗತಿಗಳು ಹಾಗೂ ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು, ನಾವು, ಸಂಹಿತೆಯ 149ನೇ ಪ್ರಕರಣದ ಉಪಬಂಧಗಳು ಅನ್ವಯಿಸಲಾದ ನಿಲುವಾಗಿದೆ ಎಂಬ ನಿರ್ಣಯಕ್ಕೆ ಬರುವಲ್ಲಿ ನ್ಯಾಯಾಲಯವು ಸರಿಯಾಗಿತ್ತು ಎಂಬ ಅಭಿಪ್ರಾಯವನ್ನು ತಳೆದಿದ್ದು, ಅದನ್ನು ಈ ಮುಂದಿನಂತೆ ಓದಲಾಗಿದೆ.

> *149. ಏಕೋದ್ದೇಶವನ್ನು ಈಡೇರಿಸುವಲ್ಲಿ ಮಾಡಲಾದ ಅಪರಾಧದ ಬಗ್ಗೆ ವಿಧಿವಿರುದ್ಧ ಕೂಟದ ಪ್ರತಿಯೊಬ್ಬ ಸದಸ್ಯನು ತಪ್ಪಿತಸ್ಥನಾಗಿರುವುದು. ವಿಧಿವಿರುದ್ಧ ಕೂಟದ ಯಾವನೇ ಸದಸ್ಯನು ಆ ಕೂಟದ ಏಕೋದ್ದೇಶವನ್ನು ಸಾಧಿಸುವಲ್ಲಿ ಅಪರಾಧವನ್ನು ಮಾಡಿದರೆ ಅಥವಾ ಆ ಉದ್ದೇಶವನ್ನು*

*ಸಾಧಿಸುವಲ್ಲಿ ಅಪರಾಧವನ್ನು ಮಾಡುವ ಸಂಭವವಿದೆಯೆಂದು ಆ ಕೂಟದ ಸದಸ್ಯರು ತಿಳಿದಿದ್ದರೆ ಆ ಅಪರಾಧವನ್ನು ಮಾಡುವ ಕಾಲಕ್ಕೆ ಅದೇ ಕೂಟದ ಸದಸ್ಯನಾಗಿದ್ದ ಪ್ರತಿಯೊಬ್ಬನೂ ಆ ಅಪರಾಧದ ಬಗ್ಗೆ ತಪ್ಪಿತಸ್ಥನಾಗುತ್ತಾನೆ.*

149ನೇ ಪ್ರಕರಣದ ಉಪಬಂಧಗಳನ್ನು, ಮಿಜಾಜಿ –ವಿರುದ್ಧ– ಉತ್ತರ ಪ್ರದೇಶ ರಾಜ್ಯ[7] ಹಾಗೂ ಮಸಲ್ತಿ –ವಿರುದ್ಧ– ಉತ್ತರ ಪ್ರದೇಶ ರಾಜ್ಯ[8] ಪ್ರಕರಣದಲ್ಲಿ ಈ ನ್ಯಾಯಾಲಯವು ವಿವರಿಸಿದೆ. ಮೇಲಿನ ಪರಿಭಾಷೆಗೆ ಎರಡು ಮೂಲತತ್ವಗಳು ನಿರ್ಣಾಯಕವಾಗಿವೆ: (i) ಅಪರಾಧವನ್ನು ಕಾನೂನು ಬಾಹಿರ ಗುಂಪು ಮಾಡಿರಬೇಕು; (ii) ಆ ಗುಂಪಿನ ಸಾಮಾನ್ಯ ಉದ್ದೇಶದ ಪ್ರಾಸಿಕ್ಯೂಷನ್‌ನಲ್ಲಿ ಅಪರಾಧವನ್ನು ಮಾಡಿರಬೇಕು ಅಥವಾ ಸಾಮಾನ್ಯ ಉದ್ದೇಶದ ಪ್ರಾಸಿಕ್ಯೂಷನ್‌ನಲ್ಲಿ ಮಾಡಲಾಗುವ ಸಂಭವವಿದೆಯೆಂದು ಆ ಗುಂಪಿನ ಸದಸ್ಯರಂಥವರು ಮಾಡಿರಬೇಕು. ಕಾನೂನು ಬಾಹಿರ ಗುಂಪಿನ ಸಾಮಾನ್ಯ ಉದ್ದೇಶ ಒಮ್ಮೆ ರುಜುವಾತಾದರೆ, ಕಾನೂನು ಬಾಹಿರ ಗುಂಪನ್ನು ರೂಪಿಸಿರುವ ಎಲ್ಲಾ ವ್ಯಕ್ತಿಗಳು ಗೋಚರ ಕೃತ್ಯವನ್ನು ಮಾಡುವರೆಂದು ಪ್ರದರ್ಶಿಸುವ ಅಗತ್ಯವಿರುವುದಿಲ್ಲ. ಸಾಮಾನ್ಯ ಉದ್ದೇಶವನ್ನು ಹಾಗೂ ಸನ್ನಿವೇಶಗಳ ಎಲ್ಲಾ ಆಜುಬಾಜುಗಳ ಆಧಾರದ ಮೇಲೆ ಕೃತ್ಯಗಳನ್ನು ಪರಿಗಣಿಸಿ ಖಚಿತ ಪಡಿಸಲಾಗಿದೆ. ಸಿಕಂದರ್ ಸಿಂಗ್ –ವಿರುದ್ಧ– ಬಿಹಾರ ರಾಜ್ಯ[9] ಪ್ರಕರಣದಲ್ಲಿ ನ್ಯಾಯಾಲಯವು ಹೀಗೆ ಅಭಿಪ್ರಾಯಪಟ್ಟಿದೆ:

*"17 ಒಂದು "ಸಾಮಾನ್ಯ ಉದ್ದೇಶ"ವನ್ನು ಮೊದಲೇ ಕಲೆತು ಯೋಜಿಸುವ ಅಗತ್ಯವಿಲ್ಲ ಹಾಗೂ ದಾಳಿ ಮಾಡುವ ಮೊದಲಿನ ಯೋಚನೆಯ ಸಾಮಾನ್ಯ ಸಭೆ. ಕಾನೂನು ಬಾಹಿರ ಸಭೆಯ ಪ್ರತಿಯೊಬ್ಬ ಸದಸ್ಯನ ದೃಷ್ಟಿಯಲ್ಲಿ ಒಂದೇ ಉದ್ದೇಶವನ್ನು ಹೊಂದಿದ್ದರೆ ಸಾಕು, ಅವರ ಸಂಖ್ಯೆ ಐದು ಅಥವಾ ಅದಕ್ಕಿಂತ ಹೆಚ್ಚಾಗಿರುವುದು ಹಾಗೂ ಆ ಉದ್ದೇಶವನ್ನು ಸಾಧಿಸಲು ಗುಂಪುಗಳಾಗಿ ಅವರು ಕಾರ್ಯನಿರ್ವಹಿಸುವುದು. ಗುಂಪಿನ "ಸಾಮಾನ್ಯ ಉದ್ದೇಶವು ಕೃತ್ಯಗಳನ್ನು ಖಚಿತಪಡಿಸುವುದಾಗಿದ್ದು, ಸದಸ್ಯರ ಭಾಷೆಯನ್ನು ಇದು ರೂಪಿಸುತ್ತದೆ ಹಾಗೂ ಸುತ್ತಮುತ್ತಣ ಎಲ್ಲಾ ಸನ್ನಿವೇಶಗಳನ್ನು ಪರಿಗಣಿಸುವುದು. ಸಭೆಯ ಸದಸ್ಯರು ಅಳವಡಿಸಿಕೊಳ್ಳಲಾದ ನಡತೆಯ*

*ಕ್ರಮದಿಂದ ಒಟ್ಟುಗೂಡಬಹುದು. ಕಾನೂನು ಬಾಹಿರ ಸಭೆಯ ಸಾಮಾನ್ಯ ಉದ್ದೇಶದ ನಿರ್ಧರಣೆಗಾಗಿ, ಕಾನೂನು ಬಾಹಿರ ಸಭೆಯ ಪ್ರತಿಯೊಬ್ಬ ಸದಸ್ಯರ ನಡತೆಯು ದಾಳಿಗೆ ಮೊದಲು ಹಾಗೂ ಆ ಸಮಯದಲ್ಲಿ ಹಾಗೂ ತದನಂತರ, ಅಪರಾಧದ ಪ್ರೇರಣೆ ಕೆಲವು ಸಂಬಂಧಪಟ್ಟ ಪರಿಗಣನೆಗಳಾಗಿರುತ್ತವೆ. ಘಟನೆಯ ಒಂದು ಹಂತದಲ್ಲಿ ಕಾನೂನು ಬಾಹಿರ ಸಭೆಯ ಸಾಮಾನ್ಯ ಉದ್ದೇಶ ಯಾವುದೆಂದರೆ, ಸಭೆಯ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡು, ಸದಸ್ಯರು ತಂದಿರುವ ಆಯುಧಗಳು ಘಟನೆ ನಡೆದ ಸ್ಥಳದಲ್ಲಿ ಅಥವಾ ಪಕ್ಕದಲ್ಲಿ ಸದಸ್ಯರ ನಡಾವಳಿಯನ್ನು ಗಮನದಲ್ಲಿಟ್ಟುಕೊಂಡು ಅಗತ್ಯವಾಗಿ ಸಂಗತಿಯ ಪ್ರಶ್ನೆಯನ್ನು ನಿರ್ಧರಿಸಬೇಕಾಗುತ್ತದೆ. ಕಾನೂನು ಬಾಹಿರ ಸಾಮಾನ್ಯ ಉದ್ದೇಶಗಳೊಂದಿಗೆ ಕಾನೂನುಬಾಹಿರ ಸಭೆಯ ಎಲ್ಲಾ ಸಂದರ್ಭಗಳಲ್ಲಿ ಅದನ್ನು ಕಾರ್ಯಕ್ಕೆ ಪರಿವರ್ತಿಸುವುದು ಅಥವಾ ಯಶಸ್ವಿಗೊಳಿಸುವುದು ಕಾನೂನಿನ ಅಡಿಯಲ್ಲಿ ಅಗತ್ಯವಿರುವುದಿಲ್ಲ."*

ಸಂಜೀವ್‌ಕುಮಾರ್ ಗುಪ್ತಾ –ವಿರುದ್ಧ– ಉತ್ತರ ಪ್ರದೇಶ ರಾಜ್ಯ[10] ಪ್ರಕರಣದ ತುಂಬಾ ಇತ್ತೀಚಿನ ನಿರ್ಣಯದಲ್ಲಿ, ಈ ನ್ಯಾಯಾಲಯವು, ಹಿಂದಿನ ಗೋಷ್ಠಿಯನ್ನು ಸಾಮಾನ್ಯ ಉದ್ದೇಶವನ್ನು ಯಾವಾಗಲೂ ಅಗತ್ಯಪಡಿಸುವುದಿಲ್ಲ ಎಂದು ಅಭಿಪ್ರಾಯಪಟ್ಟಿದ್ದು, ಕ್ಷಣದಲ್ಲಿಯೂ ಕೂಡ ರೂಪಿತವಾಗಬಹುದು. ಈ ದೃಷ್ಠಿಯನ್ನು ತೆಗೆದುಕೊಂಡು, ಈ ನ್ಯಾಯಾಲಯವು, ರಾಮಚಂದ್ರನ್ ವಿರುದ್ಧ ಕೇರಳ ರಾಜ್ಯ [11] ಪ್ರಕರಣದಲ್ಲಿನ ಮೊದಲಿನ ನಿರ್ಣಯವನ್ನು ಅವಲಂಬಿಸಿದ್ದು ಹೀಗೆ ಅಭಿಪ್ರಾಯಪಟ್ಟಿದೆ:

*"32. ಈ ಪ್ರಕರಣದಲ್ಲಿ, ಎಲ್ಲಾ ಆಪಾದಿತರು ಸಾಕ್ಷಿದಾರರಿಗೆ ಚೆನ್ನಾಗಿ ಗೊತ್ತಿದ್ದು, ಹಾಗೆಯೇ ಅವರು ಗುರುತು ಮೊದಲಾದವು ವಿವಾದದಲ್ಲಿರುವುದಿಲ್ಲ. ಭಾರತೀಯ ದಂಡ ಸಂಹಿತೆಯು 149ನೇ ಪ್ರಕರಣದ ಎರಡನೇ ಭಾಗವನ್ನು ಭಾಗವಹಿಸುವಿಕೆಯನ್ನು ರೂಪಿಸುವುದರಿಂದ ಮಹತ್ವವನ್ನು ಕಳೆದುಕೊಂಡ ಪ್ರತ್ಯೇಕತೆಯ ಗೋಚರ ಕೃತ್ಯವಾಗಿರುತ್ತದೆ."*

ಪ್ರಸ್ತುತ ಪ್ರಕರಣದಲ್ಲಿ, ಅದೇ ಅನುಪಾತವನ್ನು ಅನ್ವಯಿಸಿ ನಾವು, 149ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗಿನ ಸಾಮಾನ್ಯ ಉದ್ದೇಶವು, ಪ್ರಾರಂಭದಲ್ಲಿ ವಾಗ್ಯುದ್ಧವಾದ ನಂತರ ಮಾರಕಾಯುಧಗಳಿರುವ ಅಸ್ತ್ರಗಳಿಂದ ಆಪಾದಿತನು ಹಿಂದಿರುಗಿದ ರೀತಿಯನ್ನು ಗುಂಪಿನಲ್ಲಿ ನೋವುಂಟುಮಾಡಿದ್ದ ಗಾಯಗಳ ಸ್ವರೂಪವನ್ನು ಘಟನೆಯ ಮೂಲವು ಸ್ಪಷ್ಟಪಡಿಸುತ್ತದೆ ಎಂದು ಅಭಿಪ್ರಾಯಪಟ್ಟಿದ್ದೇವೆ.

23. ದೂರುದಾರನ ಪರವಾಗಿ ವಾದಿಸಿರುವ ನಿವೇದನೆಯನ್ನು ಎಚ್ಚರಿಕೆಯಿಂದ ಪರಿಗಣಿಸಿ, ನಾವು, ಸಂಹಿತೆಯ 304ನೇ ಪ್ರಕರಣದ ಭಾಗ Iರ ಉಪಬಂಧಗಳನ್ನು ಅಪರಾಧ ನಿರ್ಣಯವು ಆಧರಿಸಿರಬೇಕು ಎನ್ನುವ ಉಚ್ಚ ನ್ಯಾಯಾಲಯದ ನಿರ್ಣಯದಲ್ಲಿ ಹಸ್ತಕ್ಷೇಪ ಮಾಡಲು ಹೋಗಿಲ್ಲ. ಈ ನಿರ್ಣಯಕ್ಕೆ ಬರುವ ಮೂಲಕ ಹಾಗೂ ಉಚ್ಚ ನ್ಯಾಯಾಲಯದ ಅಭಿಪ್ರಾಯವನ್ನು ದೃಢಪಡಿಸಿ, ನಾವು ವಿವಾದ, ಯಾವ ಸನ್ನಿವೇಶಗಳಲ್ಲಿ ಘಟನೆ ನಡೆದಿದೆ ಹಾಗೂ ಆಜುಬಾಜಿನ ಎಲ್ಲಾ ಸನ್ನಿವೇಶಗಳ ಹಿನ್ನೆಲೆಯ ಮೇಲೆ ನಾವೇ ಆಧಾರವನ್ನು ಹೊಂದಿದ್ದೇವೆ. ಆದಾಗ್ಯೂ, ಉಚ್ಚ ನ್ಯಾಯಾಲಯವು, ವಿಧಿಸಿರುವ ಶಿಕ್ಷೆಯನ್ನು, ಹತ್ತು ವರ್ಷಗಳ ಕಠಿಣ ಕಾರಾವಾಸ ಶಿಕ್ಷೆಗೆ ಹೆಚ್ಚಿಸಬೇಕೆಂದು ನಾವು ಅಭಿಪ್ರಾಯಪಡುತ್ತೇವೆ. ತದನುಸಾರವಾಗಿ ನಾವು, 304ನೇ ಪ್ರಕರಣದ ಭಾಗ Iರ ಮೇರೆಗಿನ ಅಪರಾಧದ 1, 2, 3, 4, 6, 7, 8 ಹಾಗೂ 11ನೇ ಸಂಖ್ಯೆಯ ಆಪಾದಿತರ ಅಪರಾಧ ನಿರ್ಣಯ ಮಾಡಿರುವ ಉಚ್ಚ ನ್ಯಾಯಾಲಯದ ತೀರ್ಪನ್ನು ದೃಢಪಡಿಸುತ್ತೇವೆ. ಆದಾಗ್ಯೂ, ಅವರನ್ನು ಹತ್ತು ವರ್ಷಗಳ ಕಠಿಣ ಕಾರಾವಾಸ ಶಿಕ್ಷೆಗೆ ಒಳಪಡಿಸಲಾಗಿದೆ. ಸಂಹಿತೆಯ 149ನೇ ಪ್ರಕರಣದೊಂದಿಗೆ ಓದಲಾದ 324ನೇ ಪ್ರಕರಣದ ಮೇರೆಗಿನ ಅಪರಾಧ ನಿರ್ಣಯವನ್ನು ದೃಢಪಡಿಸಲಾಗಿದೆ. ದೂರುದಾರನು ಸಲ್ಲಿಸಿದ ಕ್ರಿಮಿನಲ್ ಅಪೀಲು ಸಂ:2011ರ 622ನ್ನು ಈ ನಿಬಂಧನೆಗಳಲ್ಲಿ ಭಾಗಶಃ ಪುರಸ್ಕರಿಸಲಾಗಿದೆ. 11 ಹಾಗೂ 12ನೇ ಸಂಖ್ಯೆಯ ಅಪಾದಿತರಿಗೆ ಸಂಬಂಧಪಟ್ಟಂತೆ ಹೇಳಿಕೆ ಸುಸಂಗತವಾಗಿಲ್ಲ. ಸಂಶಯದ ಲಾಭವನ್ನು ನೀಡಿದ್ದು, ಖುಲಾಸೆಯನ್ನು ಎತ್ತಿ ಹಿಡಿಯಲಾಗಿದೆ.

24. 2011ರ ಕ್ರಿಮಿನಲ್ ಅಪೀಲು ಸಂಖ್ಯೆ:995 ಹಾಗೂ 996ನ್ನು ಈ ನಿಬಂಧನೆಗಳಲ್ಲಿ ಭಾಗಶಃ ಪುರಸ್ಕರಿಸಲಾಗಿದೆ. ಅಪೀಲು ಸಂಖ್ಯೆ: 2011ರ 1362 ಹಾಗೂ 2011ರ 96–97ನ್ನು ತದನುಸಾರವಾಗಿ ವಜಾಗೊಳಿಸಲಾಗಿದೆ. 1, 2, 3, 4, 6, 7, 8 ಹಾಗೂ 11ನೇ ಸಂಖ್ಯೆಯ ಆಪಾದಿತರಿಗೆ, ವಿಧಿಸಲಾದ ಶಿಕ್ಷೆಯನ್ನು ಜಾರಿಗೊಳಿಸಿದ ಕೂಡಲೇ ಶರಣಾಗತಕ್ಕದ್ದು. ಜೊತೆಗೆ ತೀರ್ಪಿನ ಪ್ರತಿಯನ್ನು, ಅನುಸರಣೆಯನ್ನು ಸುನಿಶ್ಚಿತಗೊಳಿಸಲು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರಿಗೆ ಕಳುಹಿಸತಕ್ಕದ್ದು.

---

[7.] ಎಐಆರ್ 1959 ಎಸ್‌ಸಿ 572.
[8.] (1964) 8 ಎಸ್‌ಸಿಆರ್ 133.
[9.] (2010) 7 ಎಸ್‌ಸಿಸಿ 477.
[10.] (2015) 11 ಎಸ್‌ಸಿಸಿ 69.
[11]. (2011) 9 ಎಸ್‌ಸಿಸಿ 257.

*********

## ಕ್ಲೇಮು ನಿರಾಕರಣೆ

"ಪ್ರಾದೇಶಿಕ ಭಾಷೆಗಳಲ್ಲಿ ಭಾಷಾಂತರಿಸಲಾದ ತೀರ್ಪುಗಳನ್ನು ಕಕ್ಷಿದಾರರ ಆಕೆಯ/ಆತನ ಸ್ಥಳೀಯ ಭಾಷೆಯಲ್ಲಿ ಅರ್ಥ ಮಾಡಿಕೊಳ್ಳುವ ಉದ್ದೇಶಕ್ಕಾಗಿ ಮಾತ್ರ ಸೀಮಿತಗೊಳಿಸಲಾಗಿದೆ ಮತ್ತು ಇತರೆ ಯಾವುದೇ ಉದ್ದೇಶಕ್ಕೆ ಅವುಗಳನ್ನು ಬಳಸಿಕೊಳ್ಳುವಂತಿಲ್ಲ. ಎಲ್ಲ ಅಧಿಕೃತ ಹಾಗೂ ಕಚೇರಿ ಉದ್ದೇಶಗಳಿಗಾಗಿ, ಹಾಗೂ ಜಾರಿಗೊಳಿಸುವ ಮತ್ತು ಅನುಷ್ಠಾನಗೊಳಿಸುವುದಕ್ಕಾಗಿ" ತೀರ್ಪುಗಳ ಆಂಗ್ಲ ಭಾಷೆಯ ಆವೃತ್ತಿಯು ಅಧಿಕೃತವಾಗಿರತಕ್ಕದ್ದು."